## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1247 (1418)

ಮಾನ್ಯ ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 10.03.2022

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ | |
|---|---|---|---|
| ಅ | ಕಳೆದ ಮೂರು ವರ್ಷಗಳಲ್ಲಿ ನಿವೃತ್ತ ರಾಜ್ಯ ಸರ್ಕಾರಿ ನೌಕರರಿಗೆ ಪಿಂಚಣಿ ಮತ್ತು ಇತರ ಸೌಲಭ್ಯಕ್ಕಾಗಿ ವೆಚ್ಚ ಮಾಡಲಾದ ಅನುದಾನವೆಷ್ಟು; ಹಳೆ ಪಿಂಚಣಿ ಮತ್ತು ಹೊಸ ಪಿಂಚಣಿ ಯೋಜನೆಯಲ್ಲಿ ಪಿಂಚಣಿ ಮತ್ತು ಇತರ ಸೌಲಭ್ಯ ನಿಗದಿಗೆ ಇರುವ ಮಾರ್ಗಸೂಚಿಗಳು ಯಾವುವು; (ಅಗತ್ಯವಾದ ದಾಖಲೆಗಳು ಮತ್ತು ಮಾದರಿ ಪ್ರತಿಯನ್ನು ಒದಗಿಸುವುದು) | 2018-19 ರಿಂದ 2020-2021 ರವರೆಗೆ ವೆಚ್ಚ ಮಾಡಲಾದ ಅನುದಾನ ರೂ. 5244911.15. | |
| | | ಹಳೆ ಪಿಂಚಣಿ ಯೋಜನೆಯಡಿ ಸೌಲಭ್ಯ | ರಾಷ್ಟ್ರೀಯ ಪಿಂಚಣಿ ಯೋಜನೆಯಡಿ ಸೌಲಭ್ಯ |
| | | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 207 ರಿಂದ 395 ರಲ್ಲಿ ಸೂಚಿಸಿರುವಂತೆ ನಿವೃತ್ತಿ ವೇತನ/ ಉಪದಾನ / ಮರಣ ಉಪದಾನ / ಪರಿವರ್ತಿತ ಪಿಂಚಣಿ / ಕುಟುಂಬ ಪಿಂಚಣಿ ಸೌಲಭ್ಯಗಳನ್ನು ನೀಡಲಾಗುತ್ತದೆ. | ಸರ್ಕಾರದ ಆದೇಶ ಸಂ: ಆಇ/03/ಸೇನಿಸೇ/2010, ದಿನಾಂಕ: 12.10.2010, 15.10.2011 ರನ್ವಯ ಸೇವೆಯಲ್ಲಿರುವಾಗಲೇ ಮೃತರಾದ ಸರ್ಕಾರಿ ನೌಕರರ ಕುಟುಂಬಕ್ಕೆ ಇಡಿಗಂಟಿನ ಪರಿಹಾರವನ್ನು ದಿನಾಂಕ: 31.03.2018 ರವರೆಗೆ ನೀಡಲಾಗುತ್ತಿತ್ತು.<br><br>ರಾಷ್ಟ್ರೀಯ ಪಿಂಚಣಿ ಯೋಜನೆ ಅಡಿಯಲ್ಲಿ ಸೇವೆಯಿಂದ ನಿವೃತ್ತರಾಗುವ/ಸೇವೆಯಲ್ಲಿರುವಾಗಲೇ ಮೃತರಾದ/ರಾಜೀನಾಮೆ ನೀಡಿದ ನೌಕರರಿಗೆ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಸರ್ಕಾರದ ಆದೇಶ ಸಂ: ಆಇ (ವಿ) 203 ಪಿಇಎನ್ 2012, (ಭಾ), ದಿನಾಂಕ: 18.05.2016 ಮತ್ತು ಸರ್ಕಾರದ ಆದೇಶ ಸಂ: ಆಇ(ವಿ) 201 ಪಿಇಎನ್ 2021 ದಿನಾಂಕ: 29.11.2021 ರಲ್ಲಿ ತಿಳಿಸಿರುವಂತೆ ಇತ್ಯರ್ಥಪಡಿಸಲಾಗುವುದು.<br><br>ಸರ್ಕಾರದ ಆದೇಶ ಸಂ: ಆಇ/34/ಪಿ.ಇ.ಎನ್/2018, ದಿನಾಂಕ: 23.06.2018 ರಲ್ಲಿ ನಿವೃತ್ತಿ ಮತ್ತು ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯಗಳನ್ನು ದಿನಾಂಕ 01.04.2018 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.<br><br>(ಸರ್ಕಾರದ ಆದೇಶಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ) |



Generated from eOffice by G JAGADEESHA, CMO-JS(GJ), JOINT SECRETARY, CMO on 08/03/2022 01:47 PM

| | | |
|---|---|---|
| ಆ | ಹಳೆಯ ಪಿಂಚಣಿ ಮತ್ತು ಹೊಸ ಪಿಂಚಣಿ ಯೋಜನೆಯ ವ್ಯತ್ಯಾಸಗಳು ಯಾವುವು; ಪ್ರಸ್ತುತ ಹಳೆ ಪಿಂಚಣಿ ವ್ಯವಸ್ಥೆಯನ್ನು ಮುಂದುವರಿಸಿರುವ ಇಲಾಖೆಗಳು ಯಾವುವು | (see table below) |

| ಕ್ರ. ಸಂ | ಹಳೆ ಪಿಂಚಣಿ ಯೋಜನೆ | ರಾಷ್ಟ್ರೀಯ ಪಿಂಚಣಿ ಯೋಜನೆ |
|---|---|---|
| 1 | ಈ ಯೋಜನೆಯ ಅಡಿಯಲ್ಲಿರುವ ಸರ್ಕಾರಿ ನೌಕರರ ವೇತನದಿಂದ ಪಿಂಚಣಿ ಸಂಬಂಧ ಯಾವುದೇ ವಂತಿಗೆ ಕಟಾವಣೆ ಮಾಡುವುದಿಲ್ಲ | ಎನ್.ಪಿ.ಎಸ್. ಯೋಜನೆಗೆ ಒಳಪಡುವ ಸರ್ಕಾರಿ ನೌಕರರಿಗೆ ಪಿಂಚಣಿ ಸಂಬಂಧ ನೌಕರರ ಮೂಲ ವೇತನ+ತುಟ್ಟಿಭತ್ಯೆಯ ಶೇ. 10 ರಷ್ಟು ಹಾಗೂ ಸರ್ಕಾರದ ವಂತಿಗೆ ಶೇ.14 ರಷ್ಟು ಮೊತ್ತವನ್ನು ನೌಕರರ ಎನ್.ಪಿ.ಎಸ್. ಪ್ರಾನ್ ಖಾತೆಗೆ ಜಮೆ ಮಾಡಲಾಗುತ್ತದೆ.<br><br>ಎನ್.ಪಿ.ಎಸ್. ನೌಕರರು ಇಚ್ಛಿಸಿದಲ್ಲಿ ಪ್ರಾನ್ ಖಾತೆಯಲ್ಲಿ ಟೆಯರ್- II ಖಾತೆ ತೆರೆದು ಸ್ವಯಂ ಹೂಡಿಕೆ ಮಾಡಬಹುದು. |
| 2 | ಸಾಮಾನ್ಯ ಭವಿಷ್ಯ ನಿಧಿ ಸೌಲಭ್ಯವಿದೆ | ಸಾಮಾನ್ಯ ಭವಿಷ್ಯ ನಿಧಿ ಸೌಲಭ್ಯ ಇರುವುದಿಲ್ಲ. |
| 3 | ಹಳೆ ಪಿಂಚಣಿ ಯೋಜನೆ ಅಡಿ ಸೇವೆಯಿಂದ ನಿವೃತ್ತರಾದ ನೌಕರರಿಗೆ ಪಿಂಚಣಿ, ನಿವೃತ್ತಿ ಉಪದಾನ ಹಾಗೂ ಪರಿವರ್ತಿತ ಪಿಂಚಣಿ ನೀಡಲಾಗುವುದು. | ಎನ್.ಪಿ.ಎಸ್. ಯೋಜನೆ ಯಡಿಯಲ್ಲಿನ ನೌಕರರು ಸೇವೆಯಿಂದ ನಿವೃತ್ತರಾದ ಸಂದರ್ಭದಲ್ಲಿ ಸದರಿಯವರ ಪ್ರಾನ್ ಖಾತೆಯಲ್ಲಿ ರೂ. 5.00 ಲಕ್ಷಕ್ಕಿಂತ ಕಡಿಮೆ ಮೊತ್ತವಿದ್ದರೆ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು.<br><br>ಪ್ರಾನ್ ಖಾತೆಯಲ್ಲಿನ ಮೊತ್ತವು ರೂ. 5.00 ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ ಪ್ರಾನ್ ಖಾತೆಯಲ್ಲಿರುವ ಮೊತ್ತದಲ್ಲಿ ಶೇ.60 ರಷ್ಟು ಮೊತ್ತವನ್ನು ನಿವೃತ್ತ ನೌಕರರಿಗೆ ಇತ್ಯರ್ಥಪಡಿಸಿ, ಉಳಿದ ಶೇ.40 ರಷ್ಟು ಮೊತ್ತವನ್ನು ಮಾಸಿಕ ಪಿಂಚಣಿಗಾಗಿ ASP ಯಲ್ಲಿ ಹೂಡಿಕೆ ಮಾಡಲಾಗುವುದು.<br><br>ಸರ್ಕಾರದ ಆದೇಶ ದಿನಾಂಕ: 23.06.2018 ರನ್ವಯ ದಿನಾಂಕ: 01.04.2018 ರಿಂದ ಅನ್ವಯವಾಗುವಂತೆ ನಿವೃತ್ತಿ ಉಪದಾನ ಸೌಲಭ್ಯ ನೀಡಲಾಗಿದೆ. |
| 4 | ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ನಾಮ ನಿರ್ದೇಶಿತರಿಗೆ | ಎನ್.ಪಿ.ಎಸ್. ಯೋಜನೆ ಯಡಿಯಲ್ಲಿನ ನೌಕರರು ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಸದರಿಯವರ ಪ್ರಾನ್ ಖಾತೆಯಲ್ಲಿ ರೂ. 5.00 ಲಕ್ಷಕ್ಕಿಂತ ಕಡಿಮೆ ಮೊತ್ತವಿದ್ದರೆ ಮೃತರ ನಾಮ |

| | | | | |
|---|---|---|---|---|
| | | | ಕುಟುಂಬ ಪಿಂಚಣಿ, ಮರಣ ಉಪದಾನ ಸೌಲಭ್ಯ ನೀಡಲಾಗುವುದು. | ನಿರ್ದೇಶಿತರಿಗೆ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು.<br><br>ಪ್ರಾನ್ ಖಾತೆಯಲ್ಲಿನ ಮೊತ್ತವು ರೂ.5.00 ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ ಪ್ರಾನ್ ಖಾತೆಯಲ್ಲಿರುವ ಮೊತ್ತದಲ್ಲಿ ಶೇ.20 ರಷ್ಟು ಮೊತ್ತವನ್ನು ಮೃತರ ನಾಮ ನಿರ್ದೇಶಿತರಿಗೆ ಇತ್ಯರ್ಥಪಡಿಸಿ, ಉಳಿದ ಶೇ.80 ರಷ್ಟು ಮೊತ್ತವನ್ನು ಮಾಸಿಕ ಪಿಂಚಣಿಗಾಗಿ ASP ಯಲ್ಲಿ ಹೂಡಿಕೆ ಮಾಡಲಾಗುವುದು.<br><br>ಸರ್ಕಾರದ ಆದೇಶ ದಿನಾಂಕ: 23.06.2018 ರನ್ವಯ ದಿನಾಂಕ: 01.04.2018 ರಿಂದ ಅನ್ವಯವಾಗುವಂತೆ ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯಗಳನ್ನು ನೀಡಲಾಗಿದೆ. |
| | | 5 | ಸೇವೆಯಿಂದ ಸ್ವಯಂ ನಿವೃತ್ತಿ ಪಡೆದರೆ ಸದರಿ ನೌಕರರಿಗೆ ಪಿಂಚಣಿ ಹಾಗೂ ನಿವೃತ್ತ ಉಪದಾನ ನೀಡಲಾಗುವುದು. | ಎನ್.ಪಿ.ಎಸ್. ಯೋಜನೆ ಯಡಿಯಲ್ಲಿನ ನೌಕರರು ಸೇವೆಗೆ ರಾಜೀನಾಮೆ ನೀಡಿದ ಸಂದರ್ಭದಲ್ಲಿ ಸದರಿಯವರ ಪ್ರಾನ್ ಖಾತೆಯಲ್ಲಿ ರೂ. 2.50 ಲಕ್ಷಕ್ಕಿಂತ ಕಡಿಮೆ ಮೊತ್ತವಿದ್ದರೆ ನೌಕರರಿಗೆ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು ಹಾಗೂ ಪ್ರಾನ್ ಖಾತೆಯಲ್ಲಿನ ಮೊತ್ತವು ರೂ. 2.50 ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ ಪ್ರಾನ್ ಖಾತೆಯಲ್ಲಿರುವ ಮೊತ್ತದಲ್ಲಿ ಶೇ.20 ರಷ್ಟು ಮೊತ್ತವನ್ನು ನೌಕರರಿಗೆ ಇತ್ಯರ್ಥಪಡಿಸಿ, ಉಳಿದ ಶೇ.80 ರಷ್ಟು ಮೊತ್ತವನ್ನು ಮಾಸಿಕ ಪಿಂಚಣಿಗಾಗಿ ASP ಯಲ್ಲಿ ಹೂಡಿಕೆ ಮಾಡಲಾಗುವುದು. |
| | | ಪ್ರಸ್ತುತ ಯಾವುದೇ ಇಲಾಖೆಯು ಹಳೆ ಪಿಂಚಣಿ ಯೋಜನೆಯನ್ನು ಮುಂದುವರೆಸಿರುವುದಿಲ್ಲ. | | |
| ಇ | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ ನಿವೃತ್ತರಾದ ನೌಕರರಿಗೆ 90 ವರ್ಷ ಮೀರಿದ ನಂತರ ಪಿಂಚಣಿಯಲ್ಲಿ ಶೇ. 10 ರಷ್ಟು ಕಡಿತಗೊಳಿಸುತ್ತಿರುವುದು ನಿಜವೇ; ಇದಕ್ಕೆ ಕಾರಣವೇನು; (ಆದೇಶ ಪ್ರತಿ ಒದಗಿಸುವುದು) ಇದರಿಂದ ಹಿರಿಯ | ಸರ್ಕಾರದ ಆದೇಶ ಸಂಖ್ಯೆ: ಆಇ (ವಿ) 27 ಪಿಇಎನ್ 2007, ದಿನಾಂಕ: 13.10.2010 ರಲ್ಲಿ 90 ವರ್ಷಗಳು ಮೀರಿದ ಪಿಂಚಣಿದಾರರಿಗೆ /ಕುಟುಂಬ ಪಿಂಚಣಿದಾರರಿಗೆ ಶೇ.50 ರಷ್ಟು ಹೆಚ್ಚುವರಿ ಪಿಂಚಣಿಯನ್ನು ನೀಡಲಾಗುತ್ತಿತ್ತು.<br><br>ಸರ್ಕಾರದ ಆದೇಶ ಸಂಖ್ಯೆ: ಆಇ (ವಿ) 120 ಪಿಇಎನ್ 2018, ದಿನಾಂಕ: 11.01.2019 ರಲ್ಲಿ ದಿನಾಂಕ: 01.01.2019 ಕ್ಕೆ 90 ವರ್ಷಗಳು ಮೀರಿದ ಪಿಂಚಣಿದಾರರು/ಕುಟುಂಬ ಪಿಂಚಣಿದಾರರಿಗೆ ಶೇ.40 ರಷ್ಟು ಪಿಂಚಣಿಯನ್ನು ನೀಡಲು ಆದೇಶಿಸಿದೆ.<br><br>ಆದರೆ, ದಿನಾಂಕ: 01.01.2019 ಕ್ಕಿಂತ ಮುಂಚಿತವಾಗಿ 90 ವರ್ಷಗಳು ಮೀರಿದ ಪಿಂಚಣಿದಾರರು /ಕುಟುಂಬ ಪಿಂಚಣಿದಾರರಿಗೆ | | |



Generated from eOffice by G JAGADEESHA, CMO-JS(GJ), JOINT SECREATRY, CMO on 08/03/2022 01:47 PM

DFA/688185

| | | |
|---|---|---|
| | ನಾಗರೀಕರಿಗೆ ತೊಂದರೆ ಯಾಗುವುದಿಲ್ಲವೇ; ಇದನ್ನು ಸರಿಪಡಿಸಲು ಸರ್ಕಾರದ ಕ್ರಮವೇನು? | ಶೇ.50 ರಷ್ಟು ಹೆಚ್ಚುವರಿ ಪಿಂಚಣಿಯನ್ನು ಮುಂದುವರೆಸಲಾಗಿದೆ. |

ಆಇ-ಪಿಇಎನ್/69/2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECREATRY, CMO on 08/03/2022 01:47 PM

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬಗಳಿಗೆ ನೀಡಬಹುದಾದ ಇಡಿಗಂಟಿನ ಪರಿಹಾರ ನೀಡುವ ಬಗ್ಗೆ.

**ಓದಲಾಗಿದೆ:** ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ (ವಿಶೇಷ) 04 ಪಿಇಟಿ 2005 ದಿ:31.03.2006

******

**ಪ್ರಸ್ತಾವನೆ:-**

ರಾಜ್ಯ ಸರ್ಕಾರದ ಸೇವೆಗೆ ದಿ:01.04.2006ರಂದು ಅಥವಾ ತರುವಾಯ ಸೇರುವ ಎಲ್ಲಾ ನೇಮಕಾತಿದಾರರಿಗೆ ಕಡ್ಡಾಯಗೊಳ್ಳುವಂತೆ "ಹೊಸ ವ್ಯಾಖ್ಯಾನಿಸಿದ ಅಂಶದಾಯಿ **ಕೊಡುಗೆ ಯೋಜನೆ**"ಯನ್ನು ಜಾರಿಗೊಳಿಸಿದೆ. ಈ ಯೋಜನೆಯನ್ವಯ ಸರ್ಕಾರಿ ನೌಕರನು **ಮೂಲ ವೇತನ ಮತ್ತು ಅದರ ಮೇಲೆ** ಲಭ್ಯವಾಗುವ ತುಟ್ಟಿಭತ್ಯೆಯ ಶೇಕಡ 10% ರಷ್ಟನ್ನು **ಮೇಲೆ ಓದಲಾದ ಸರ್ಕಾರಿ ಆದೇಶದನ್ವಯ ಕೊಡುಗೆಯಾಗಿ ನೀಡಬೇಕಾಗುತ್ತದೆ.** ಸರ್ಕಾರವು ಅಷ್ಟೇ ಮೊತ್ತದ ಕೊಡುಗೆಯನ್ನು ನೀಡುತ್ತದೆ. ಈ ಯೋಜನೆಯ ನಿಧಿಯನ್ನು Pension Fund Regulatory and Development Authority (PFRDA)ಯು ನಿರ್ವಹಿಸುತ್ತದೆ. ಈ ಯೋಜನೆಯನ್ವಯ ಸರ್ಕಾರಿ ನೌಕರರು ಸಾಮಾನ್ಯವಾಗಿ ವಯೋ ನಿವೃತ್ತಿಯ ದಿನಾಂಕದಂದು ಯೋಜನೆಯಿಂದ ನಿರ್ಗಮಿಸುತ್ತಾರೆ. ನಿರ್ಗಮನಗೊಳ್ಳುವ ಸಮಯದಲ್ಲಿ, ಸರ್ಕಾರಿ ನೌಕರನು ಕಡ್ಡಾಯವಾಗಿ ಪಿಂಚಣಿ ಸಂಪತ್ತಿನ ಶೇಕಡ 40%ರಷ್ಟು ಮೊಬಲಗನ್ನು ವರ್ಷಾಸನಗಳಲ್ಲಿ (Annuity) ತೊಡಗಿಸಬೇಕಾಗುವುದು. ಇದರಿಂದ ಅವರ ಜೀವಿತ ಅವಧಿಯಲ್ಲಿ ಪಿಂಚಣಿ ಮತ್ತು ತರುವಾಯ ಅವರ ಅವಲಂಬಿತರಿಗೆ ಕುಟುಂಬ ನಿವೃತ್ತಿ ವೇತನ ದೊರೆಯುತ್ತದೆ. ಉಳಿದ ಪಿಂಚಣಿ ಸಂಪತ್ತನ್ನು (60%) ಸರ್ಕಾರಿ ನೌಕರರಿಗೆ ಹಿಂದಿರುಗಿಸಲಾಗುವುದು. ಈ ಯೋಜನೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಅವರು ನಿವೃತ್ತಿಗೊಂಡ ನಂತರದಲ್ಲಿ ಈ ಯೋಜನೆಯನ್ವಯ ಪಡೆಯಲರ್ಹವಾದ ಮಾತ್ರ ಅವಕಾಶವನ್ನು ಹೊಂದಿರುವುದಾಗಿದೆ. ವಯೋ ನಿವೃತ್ತಿ ಮುನ್ನವೇ ಸೇವೆಯಲ್ಲಿದ್ದಾಗ ಮೃತ ಹೊಂದುವ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಅವರ ಕುಟುಂಬದವರಿಗೆ ನೀಡಬೇಕಾದ ಪರಿಹಾರದ ಕುರಿತು ಅವಕಾಶವನ್ನು ಕಲ್ಪಿಸಲಾಗಿಲ್ಲ.

ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಸೇವೆಯಲ್ಲಿರುವಾಗಲೇ ಮೃತರಾಗುವ ನೌಕರರ ಕುಟುಂಬದವರ ರಕ್ಷಣೆಯ ಹಿತದೃಷ್ಟಿಯಿಂದ ಇಂತಹ ಮೃತ ನೌಕರ

ಕುಟುಂಬದವರಿಗೆ ಪರಿಹಾರ ನೀಡುವ ಯೋಜನೆಯನ್ನು ಹೊಂದಲು ಸರ್ಕಾರವು ಉದ್ದೇಶಿಸಿ ಅದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲು ಹರ್ಷಿಸುತ್ತದೆ.

**<u>ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ಬೆಂಗಳೂರು,</u>**

**<u>ದಿನಾಂಕ:12.10.2010</u>**

ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ದಿ:01.04.2006ರ ಮತ್ತು ನಂತರ ಸೇವೆಗೆ ಸೇರಿದ ರಾಜ್ಯ ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗಲೇ ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ ಕೆಳಕಂಡಂತೆ ಇಡಿಗಂಟಿನ ಪರಿಹಾರವನ್ನು ನೀಡಲು ಮಂಜೂರಾತಿ ನೀಡಿದೆ.

| ಸೇವಾ ಅವಧಿ | ಪರಿಹಾರ |
|---|---|
| ಒಂದು ವರ್ಷಕ್ಕಿಂತ ಕಡಿಮೆ | ತಿಂಗಳ ಉಪಲಬ್ದದ ನಾಲ್ಕರಷ್ಟು |
| ಒಂದು ವರ್ಷಕ್ಕಿಂತ ಮೇಲ್ಪಟ್ಟು ಮತ್ತು ಐದು ವರ್ಷಕ್ಕಿಂತ ಕಡಿಮೆ | ತಿಂಗಳ ಉಪಲಬ್ದದ ಹನ್ನೆರಡರಷ್ಟು |
| ಐದು ವರ್ಷಕ್ಕಿಂತ ಮೇಲ್ಪಟ್ಟು ಮತ್ತು ಇಪ್ಪತ್ತು ವರ್ಷಕ್ಕಿಂತ ಕಡಿಮೆ | ತಿಂಗಳ ಉಪಲಬ್ದದ ಇಪ್ಪನಾಲ್ಕರಷ್ಟು |
| ಇಪ್ಪತ್ತು ವರ್ಷಕ್ಕೂ ಮೇಲ್ಪಟ್ಟು | ಗರಿಷ್ಟ 30ರಷ್ಟು ಮತ್ತು ಕನಿಷ್ಟ 24ರಷ್ಟು ಉಪಲಬ್ದಗಳಿಗೊಳಪಟ್ಟು ಅರ್ಹತಾ ಸೇವೆಯ ಪ್ರತಿ ಪೂರ್ಣಗೊಂಡ ಒಂದು ವರ್ಷದ ಅವದಿಗೆ ಒಂದು ತಿಂಗಳ ಉಪಲಬ್ದ. |

(2). ಈ ಉದ್ದೇಶಕ್ಕೆ "ಉಪಲಬ್ದ" ಎಂದರೆ ಸರ್ಕಾರಿ ನೌಕರನು ತನ್ನ ಮರಣ ಸಮಯದಲ್ಲಿ ಹೊಂದಿದ್ದ ಹುದ್ದೆಗೆ ಅನ್ವಯಿಸಲಾಗಿದ್ದ, ವೇತನ ಶ್ರೇಣಿಯ ಮೂಲ ವೇತನ ಅಲ್ಲದೆ ಈ ಕೆಳಕಂಡ (ಅ) ರಿಂದ (ಇ)ಗಳನ್ನು ಸೇರಿಸಿ ಅರ್ಥೈಸಿಕೊಳ್ಳತಕ್ಕದ್ದು.

(ಅ) ಗರಿಷ್ಠ ವೇತನ ಶ್ರೇಣಿಗೂ ಮೀರಿ, ಸ್ಥಗಿತ ವೇತನ ಬಡ್ತಿ ನೀಡಲಾಗಿದ್ದಲ್ಲಿ ಅದು

(ಆ) ಕರ್ನಾಟಕ ನಾಗರೀಕ ಸೇವೆಗಳು (ಪರಿಷ್ಕೃತ ವೇತನ) ನಿಯಮಾವಳಿಗಳು 2007ರ ನಿಯಮ 7ರ ಉಪನಿಯಮ (3)ರ ಅಡಿ ವೈಯಕ್ತಿಕ ವೇತನ ನೀಡಲಾಗಿದ್ದಲ್ಲಿ ಅದು.

(ಇ) ಪ್ರಸಕ್ತ ಶ್ರೇಣಿಯ ಗರಿಷ್ಠ ವೇತನಕ್ಕಿಂತ ಹೆಚ್ಚಿಗೆಯಾಗಿ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 13 ಎಸ್‌ಆರ್‌ಪಿ 2002 ದಿ:09.05.2002ರನ್ವಯ ನೀಡಲಾದ ಹೆಚ್ಚುವರಿ ವೇತನ ಬಡ್ತಿ.

(3) ಈ ಉದ್ದೇಶಕ್ಕಾಗಿ "ಕುಟುಂಬ" ಎಂದರೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958, ನಿಯಮ 302ರಲ್ಲಿ ಪರಿಭಾಷಿಸಿರುವ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ

(4) ಸರ್ಕಾರಿ ನೌಕರನು, ಸರ್ಕಾರಿ ಸೇವೆಯಲ್ಲಿ ಖಾಯಂ ಆದ ಕೂಡಲೇ ಪರಿಹಾರವನ್ನು ಸ್ವೀಕರಿಸುವ ಅಧಿಕಾರವನ್ನು ಒಬ್ಬನಿಗೆ ಅಥವಾ ಹೆಚ್ಚು ಜನರಿಗೆ ಪ್ರಧಾನ ಮಾಡುವ ನಾಮನಿರ್ದೇಶವನ್ನು ಮಾಡತಕ್ಕದ್ದು.

(ಎ) ನಾಮನಿರ್ದೇಶನವನ್ನು ಮಾಡುವ ಕಾಲಕ್ಕೆ ಸರ್ಕಾರಿ ನೌಕರನು ಕುಟುಂಬವನ್ನು ಹೊಂದಿದ್ದರೆ ಆ ನಾಮನಿರ್ದೇಶನವು ಅವನ ಕುಟುಂಬ ಸದಸ್ಯರ ಹೊರತಾಗಿ ಇತರ ಯಾವನೇ ವ್ಯಕ್ತಿಯ ಅಥವಾ ವ್ಯಕ್ತಿಗಳ ಪರವಾಗಿ ಇರತಕ್ಕದ್ದಲ್ಲ.

(ಬಿ) ಪ್ರತಿಯೊಬ್ಬ ಸರ್ಕಾರಿ ನೌಕರನು ತನ್ನ ಮದುವೆಯ ಮುಂಚಿತವಾಗಿ ಮಾಡಿದ ನಾಮನಿರ್ದೇಶನವು ಆತನ ಮದುವೆಯ ನಂತರ ತಾನೇ ತಾನಾಗಿ ಅನೂರ್ಜಿತವಾಗುವುದು ಮತ್ತು ನಾಮನಿರ್ದೇಶನವು ಪತಿ ಅಥವಾ ಪತ್ನಿಯ ಹೆಸರಿನಲ್ಲಿ ಆಗಿದೆ ಎಂದು ಭಾವಿಸತಕ್ಕದ್ದು.

(ಸಿ) ಸರ್ಕಾರಿ ನೌಕರನು ನಾಮನಿರ್ದೇಶನ ಮಾಡದೇ ಇದ್ದಲ್ಲಿ, ಅಂತಹ ನೌಕರನು ಮೃತರಾದರೆ ಪರಿಹಾರವನ್ನು ಕ.ನಾ.ಸೇ.ನಿ.ನಿಯಮ 302ನೇಯ ನಿಯಮದಲ್ಲಿ ಉಪಬಂಧಿಸಿದ ಪ್ರಕಾರ ಅವನ ಕುಟುಂಬದ ಜೀವಂತ ಸದಸ್ಯರಿಗೆ ಮಂಜೂರು ಮಾಡಬಹುದು

(5) "ಸೇವಾ ಅವಧಿ" ಎಂದರೆ ವೈದ್ಯಕೀಯ ಕಾರಣಗಳ ಮೇಲೆ ಅಸಾಧಾರಣ ರಜೆ ಒಳಗೊಂಡಂತೆ ವಿಧದ ರಜೆಗಳ ಮೇಲೆ ಕಳೆದ ಕಾಲವನ್ನು ಸೇವೆಯೆಂದು ಪರಿಗಣಿಸಲಾಗುವುದು. ಲೆಕ್ಕಕ್ಕಿಲ್ಲದ ಅವಧಿ (Dies-non), ಕರ್ತವ್ಯ ಅಲ್ಲದ ಅವಧಿ (Period not spent on duty) ಮತ್ತು ವೈದ್ಯಕೀಯ ಕಾರಣಗಳನ್ನು ಹೊರತುಪಡಿಸಿ ಇನ್ನಾವುದೇ ಕಾರಣದಿಂದ ಮಂಜೂರಾದ ಅಸಾಧಾರಣ ರಜೆಯನ್ನು ಸೇವಾ ಅವಧಿ ಎಂದು ಪರಿಗಣಿಸಲಾಗಿಲ್ಲ.

(6) ಅಧಿಕಾರಿ/ನೌಕರರನು ಸೇವೆಯಲ್ಲಿರುವಾಗ ಮರಣಹೊಂದಿದ ವಿಷಯವು ತಲುಪಿದ ನಂತರ, ಕಚೇರಿ ಮುಖ್ಯಸ್ಥನು, ಮೃತ ಸರ್ಕಾರಿ ನೌಕರನ ಕುಟುಂಬಕ್ಕೆ ನಮೂನೆ-ಎ ಯಲ್ಲಿ ಸೂಚಿಸಿರುವ ಮಾಹಿತಿ/ದಾಖಲೆಗಳನ್ನು ಕಳುಹಿಸುವಂತೆ ಕೋರಿ ಪತ್ರವನ್ನು ಕಳುಹಿಸಬೇಕು ಮತ್ತು ಅದರಲ್ಲಿ ನಮೂದಿಸಿರುವ ಅವಶ್ಯ ದಸ್ತಾವೇಜುಗಳನ್ನು ಸ್ವೀಕರಿಸಿದ ನಂತರ, ಪರಿಶೀಲಿಸಿ ಪರಿಹಾರವನ್ನು, ಕಚೇರಿ ಮುಖ್ಯಸ್ಥರು, ನಮೂನೆ ಬಿ ಯಲ್ಲಿರುವಂತೆ ಪರಿಹಾರವನ್ನು ಮಂಜೂರು ಮಾಡುವುದು. ಹಾಗೂ ಸರ್ಕಾರಿ ನೌಕರನ ಸೇವಾ ಪುಸ್ತಕದೊಂದಿಗೆ ಎಲ್ಲಾ

ದಸ್ತಾವೇಜುಗಳನ್ನು ಮಹಾಲೇಖಪಾಲರಿಗೆ ಕಳುಹಿಸಬೇಕು. ಮೃತ ನೌಕರರಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಮೊಬಲಗು ಹಾಗೂ ಅವರಿಂದ ಬರಬೇಕಾದ ಬಾಕಿ ಮತ್ತು ಇತರೇ ಮುಂಗಡಗಳ ಬಾಕಿ ಮೊಬಲಗನ್ನು ಪರಿಹಾರ ಮೊತ್ತದಲ್ಲಿ ಹೊಂದಾಣಿಕೆ ಮಾಡಿಕೊಂಡು ಉಳಿದ ಮೊಬಲಗನ್ನು ಮಂಜೂರು ಮಾಡುವುದು. ಅದನ್ನು ಪರಿಶೀಲಿಸಿ ಮಹಾಲೇಖಪಾಲರು ಪರಿಹಾರವನ್ನು ಅಧಿಕರಿಸುವರು (will authorize). ಮಹಾಲೇಖಪಾಲರಿಂದ ಅಧಿಕರಿಸಿದ ಆದೇಶ ಸ್ವೀಕರಿಸಿದ ಮೇಲೆ ಪರಿಹಾರವನ್ನು ಒಂದೇ ಮೊತ್ತದಲ್ಲಿ ಖಜಾನೆ ಮೂಲಕ ಸಂದಾಯ ಮಾಡತಕ್ಕದ್ದು.

(7) ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯಲ್ಲಿನ ನಿಯಮ ಮತ್ತು ಷರತ್ತಿನನ್ವಯ ಮೃತ ನೌಕರನ ಖಾತೆಯಲ್ಲಿ ಪಡೆಯಲರ್ಹವಾದ ಮೊಬಲಗನ್ನು ಕುಟುಂಬವು ಪಡೆಯಲು ಅರ್ಹರಿರುತ್ತದೆ.

(8) ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2071-01-104-2-07-2006 ರ ನಂತರ ಸೇವೆಗೆ ಸೇರಿದ ನೌಕರರಿಗೆ ಪರಿಷ್ಕೃತ ನಿಯಮಗಳಡಿ ಮರಣ ಪರಿಹಾರ" - ರಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ. ನಾರಾಯಣ) 12/10/14
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-1).

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 500 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು/ವಿಶೇಷ ಕಾರ್ಯದರ್ಶಿಗಳು ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳಿಗೆ ಹಾಗೂ ಅಧೀನ ಕಾರ್ಯದರ್ಶಿಗಳಿಗೆ.
3. ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ

೪

5. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
7. ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕ ಪರಿಶೋಧನೆ: ಜಿ.ಎಂ.ಶಾಖೆ), ಕರ್ನಾಟಕ, ಬೆಂಗಳೂರು.
8. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು. ಪತ್ರದೊಂದಿಗೆ
10. ರಿಜಿಸ್ಟ್ರಾರ್, ಕರ್ನಾಟಕ ಲೋಕಯುಕ್ತ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ಬೆಂಗಳೂರು.
13. ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.
14. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
15. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು
16. ಕರ್ನಾಟಕ ಸರ್ಕಾರಿ ಸಚಿವಾಲಯದ ಎಲ್ಲಾ ಶಾಖೆಗಳು.
17. ಕರ್ನಾಟಕ ಸರ್ಕಾರಿ ಸಚಿವಾಲಯ ಗ್ರಂಥಾಲಯ/ ವಿಧಾನ ಮಂಡಲ ಗ್ರಂಥಾಲಯ
18. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ (ಎಲ್ಲಾ ಜಿಲ್ಲಾ ಖಜಾನೆಗಳು)
19. ವಾರಪತ್ರ.

ನಮೂನೆ-ಎ

**ಸೇವೆಯಲ್ಲಿದ್ದಾಗಲೇ ಮೃತರಾದ ಸರ್ಕಾರಿ ನೌಕರನ ಕುಟುಂಬದವರು ಪರಿಹಾರಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ**

| | | |
|---|---|---|
| 1. | ಅರ್ಜಿದಾರರ ಹೆಸರು | |
| 2. | ಅರ್ಜಿದಾರರ ಪೂರ್ಣ ವಿಳಾಸ | |
| 3. | ಮೃತ ಸರ್ಕಾರಿ ನೌಕರನ ಹೆಸರು | |
| 4. | ಮರಣದ ಸಮಯದಲ್ಲಿ ಮೃತ ವ್ಯಕ್ತಿ ಕೆಲಸ ಮಾಡುತ್ತಿದ್ದ ಕಚೇರಿ/ಇಲಾಖೆ ಮತ್ತು ಹುದ್ದೆಯ ಪದನಾಮ | |
| 5. | ಅರ್ಜಿದಾರನೊಂದಿಗೆ ಮೃತ ಸರ್ಕಾರಿ ನೌಕರನಿಗಿದ್ದ ಸಂಬಂಧ | |
| 6. | ಸರ್ಕಾರಿ ನೌಕರ ಮೃತನಾದ ದಿನಾಂಕ | |
| 7. | ಮೃತನ ಸಂಬಂಧಿಯ ಹೆಸರು ಮತ್ತು ವಯಸ್ಸು | |
| | ಹೆಸರು | ಹುಟ್ಟಿದ ದಿನಾಂಕ (ಕ್ರಿಸ್ತಶಕದ ಮೂಲಕ) |
| | ಗಂಡು ಮಕ್ಕಳು, ಅವಿವಾಹಿತ ಮತ್ತು ವಿಧವೆಯರಾದ ಅಥವಾ ವಿವಾಹ ವಿಚ್ಛೇದನ ಹೊಂದಿದ ಹೆಣ್ಣು ಮಕ್ಕಳು, ತಂದೆ, ತಾಯಿ ಇತ್ಯಾದಿ | |
| 8. | ಸಂದಾಯವನ್ನು ಪಡೆಯಲಿಚ್ಛಿಸುವ ಖಜಾನೆ/ ಉಪ ಖಜಾನೆಯ ಹೆಸರು | |
| 9. | ಕೆಳಕಂಡ ದಸ್ತಾವೇಜುಗಳನ್ನು ಅರ್ಜಿ ಜೊತೆ ಲಗತ್ತಿಸಲಾಗಿದೆಯೇ? | |
| (1) | ಮರಣ ಪ್ರಮಾಣ ಪತ್ರ (ಮೂಲ) | |
| (2) | ಗೆಜೆಟೆಡ್ ಅಧಿಕಾರಿಯು ಯುಕ್ತವಾಗಿ ದೃಢೀಕರಿಸಿದ ಅರ್ಜಿದಾರನ ಪಾಸ್‌ಪೋರ್ಟ್ ಅಳತೆಯ ಎರಡು ಭಾವ ಚಿತ್ರಗಳು | |
| (3) | ಯುಕ್ತವಾಗಿ ದೃಢೀಕರಿಸಿದ ಅರ್ಜಿದಾರನ ಎರಡು ಮಾದರಿ ಸಹಿಗಳನ್ನು ಹೊಂದಿರುವ ಎರಡು ಚೀಟಿಗಳು | |
| (4) | ಯುಕ್ತವಾಗಿ ದೃಢೀಕರಿಸಿದ ಅರ್ಜಿದಾರನ ಎಡಗೈ ಹೆಬ್ಬೆಟ್ಟಿನ ಮತ್ತು ಬೆರಳಿನ ಗುರುತನ್ನು ಹೊಂದಿರುವ ಪ್ರತಿ ಎರಡು ಚೀಟಿಗಳು (ಅರ್ಜಿದಾರರು ಅನಕ್ಷರಸ್ಥರಾಗಿದ್ದ ಸಂದರ್ಭದಲ್ಲಿ ಮಾತ್ರ ಅನ್ವಯಿಸುತ್ತದೆ) | |
| (5) | ಅರ್ಜಿದಾರನ ಎತ್ತರ ಮತ್ತು [illegible] ಚಿಹ್ನೆಗಳ ವಿವರಗಳನ್ನು [illegible] | |

| | |
|---|---|
| (6) | ಸಹಜ ಪೋಷಕರು ಜೀವಂತವಿರದಿದ್ದ ಸಂದರ್ಭದಲ್ಲಿ ಅಪ್ರಾಪ್ತ ವಯಸ್ಕ ಮಕ್ಕಳಿಗೆ ಸಕ್ಷಮ ನ್ಯಾಯಾಲಯವು ನೀಡುವ ಪೋಷಕ ಪ್ರಮಾಣ ಪತ್ರ |
| (7) | ತಹಶೀಲ್ದಾರ್ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಕಂದಾಯ ಪ್ರಾಧಿಕಾರಿಯು ನೀಡಿದ ಅವರ ಜನ್ಮ ದಿನಾಂಕಗಳನ್ನು ಸೂಚಿಸುವ ಕುಟುಂಬದ ಜೀವಂತ ಸದಸ್ಯರ ಒಂದು ಪಟ್ಟಿ. ಕುಟುಂಬದಲ್ಲಿ ವಿವಾಹಿತ ಹೆಣ್ಣು ಮಕ್ಕಳು ಇದ್ದರೆ ವಿವಾಹದ ದಿನಾಂಕವನ್ನು ನಮೂದಿಸತಕ್ಕದ್ದು. |

ಸ್ಥಳ:

ದಿನಾಂಕ:

ಅರ್ಜಿದಾರನ ಸಹಿ ಅಥವಾ

ಎಡಗೈ ಹೆಬ್ಬೆಟ್ಟಿನ ಗುರುತು

**ಟಿಪ್ಪಣಿ:** ಮೃತ ವ್ಯಕ್ತಿಯ ಅಪ್ರಾಪ್ತ ವಯಸ್ಕ ಮಕ್ಕಳ ಪ್ರಕರಣಗಳಲ್ಲಿ ಪೋಷಕರು ಅರ್ಜಿಯನ್ನು ಸಲ್ಲಿಸಬೇಕು.

* ತಂದೆ ಅಥವಾ ತಾಯಿ ಅಪ್ರಾಪ್ತ ವಯಸ್ಕ ಮಕ್ಕಳ ಸಹಜ ಪೋಷಕರು. ಮುಸ್ಲಿಂ ಕುಟುಂಬಗಳಲ್ಲಿ ತಾಯಿ ಸಹಜ ಪೋಷಕಳಲ್ಲ.

# ನಮೂನೆ-ಬಿ

(ಪರಿಹಾರ ಮಂಜೂರಾತಿಯ ನಮೂನೆ)

| | | |
|---|---|---|
| 1 | ಸರ್ಕಾರಿ ನೌಕರನ ಹೆಸರು | |
| 2 | ತಂದೆಯ ಹೆಸರು (ಮತ್ತು ಮಹಿಳಾ ಸರ್ಕಾರಿ ನೌಕರರ ಸಂದರ್ಭದಲ್ಲಿ ಪತಿಯ ಹೆಸರು) | |
| 3 | ಧರ್ಮ ಮತ್ತು ರಾಷ್ಟ್ರೀಯತೆ | |
| 4 | ಕಾರ್ಯಸಂಸ್ಥೆಯ ಹೆಸರು ಸೇರಿದಂತೆ ಕಡೆಯದಾಗಿ ಯಾವ ಹುದ್ದೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ | |
| 5 | ಸೇವೆಯ ಪ್ರಾರಂಭದ ದಿನಾಂಕ | |
| 6 | ಸೇವೆಯ ಮುಕ್ತಾಯದ ದಿನಾಂಕ | |
| 7 | ಧಾರಣ ಮಾಡಿದ ಮೂಲ ಹುದ್ದೆ | |
| 8 | ಮರಣಕ್ಕೆ ಮುಂಚೆ ನಿರಂತರವಾಗಿ ಸಲ್ಲಿಸಿದ ಸೇವೆಯ ಅವಧಿ (ಲೆಕ್ಕಕ್ಕಿಲ್ಲದ ಅವಧಿ (Dies-non), ಕರ್ತವ್ಯ ಅಲ್ಲದ ಅವಧಿ (Period not spent on duty) ಮತ್ತು ವೈದ್ಯಕೀಯ ಕಾರಣಗಳನ್ನು ಹೊರತುಪಡಿಸಿ ಇನ್ನಾವುದೇ ಕಾರಣದಿಂದ ಮಂಜೂರಾದ ಅಸಾಧಾರಣ ರಜೆಯನ್ನು ಹೊರತುಪಡಿಸಿ) | |
| 9 | "ಉಪಲಬ್ಧ" | |
| 10 | ಮಂಜೂರಾದ ಪರಿಹಾರದ ಮೊತ್ತ | |
| 11 | ಸಂದಾಯದ ಸ್ಥಳ (ಸರ್ಕಾರಿ ಖಜಾನೆ ಅಥವಾ ಉಪ ಖಜಾನೆ) | |

ಈ ಕೆಳಗೆ ಸಹಿ ಮಾಡಿರುವವರು ದಿವಂಗತ ಶ್ರೀಮತಿ/ಶ್ರೀ...... ..... ರವರಿಗೆ ಸಂಬಂಧಿಸಿದ ಮೇಲ್ಕಂಡ ವಿವರಗಳಿಗೆ ಮನದಟ್ಟು ಮಾಡಿಕೊಂಡು, ನಿಯಮಗಳ ಮೇರೆಗೆ ಅಂಗೀಕಾರಾರ್ಹವಿರುವ ಲೆಕ್ಕ ಪರಿಶೋಧನಾಧಿಕಾರಿಯು ಅಂಗೀಕರಿಸಿದಂತೆ ಶ್ರೀಮತಿ/ಶ್ರೀ...... ..... ಇವರಿಗೆ ರೂ....... (ಅಕ್ಷರಗಳಲ್ಲಿ: ...... .... ...... ......).) ಪರಿಹಾರ ಮಂಜೂರಾಗಿರುವ ಬಗ್ಗೆ ಆದೇಶಿಸಲಾಗಿದೆ.

ಮಂಜೂರಾತಿ ಪ್ರಾಧಿಕಾರಿಯ ಸಹಿ ಮತ್ತು ಪದನಾಮ

### ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬಗಳಿಗೆ ನೀಡಬಹುದಾದ ಇಡಿಗಂಟಿನ ಪರಿಹಾರ ನೀಡುವ ಬಗ್ಗೆ.**

ಓದಲಾಗಿದೆ: 1 ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010
2 ಮಹಾಲೇಖಪಾಲರ ಪತ್ರ ಸಂಖ್ಯೆ. DM/GI/F [illegible] ದಿನಾಂಕ 28-12-2010

**ಪ್ರಸ್ತಾವನೆ:**

ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ಅಧಿಕಾರಿ/ನೌಕರರನು ಸೇವೆಯಲ್ಲಿರುವಾಗ ಮರಣಹೊಂದಿದ ಸಂದರ್ಭದಲ್ಲಿ ಕಚೇರಿ ಮುಖ್ಯಸ್ಥನು, ಅವಶ್ಯ ದಸ್ತಾವೇಜುಗಳನ್ನು ಸ್ವೀಕರಿಸಿ, ಇಲಾಖಾ ಮುಖ್ಯಸ್ಥರಿಗೆ ಕಳುಹಿಸಬೇಕೆಂದು ಅದನ್ನು ಪರಿಶೀಲಿಸಿ ನಂತರ, ಪರಿಹಾರವನ್ನು ಇಲಾಖಾ ಮುಖ್ಯಸ್ಥರು ಮಂಜೂರು ಮಾಡುವುದೆಂದು ಮತ್ತು ಅದರ ಆಧಾರದ ಮೇಲೆ ಮಹಾಲೇಖಪಾಲರು ಪರಿಹಾರವನ್ನು ಅಧಿಕರಿಸುವರೆಂದು (will authorize) ಮೇಲೆ ಓದಲಾದ ಕ್ರ.ಸಂಖ್ಯೆ:1 ರಲ್ಲಿನ ದಿ: 12-10-2010 ರ ಆದೇಶದಲ್ಲಿ ಸೂಚಿಸಲಾಗಿದೆ

ಹೊಸ ಪಿಂಚಣಿ ಯೋಜನೆ ಜಾರಿಗೆ ಬಂದ ನಂತರ Central Record Keeping Agency ಯನ್ನು ನೇಮಿಸಿರುವುದರಿಂದ, ಈ ಪ್ರಕ್ರಿಯೆಯಲ್ಲಿ ಮಹಾಲೇಖಪಾಲರ ಪಾತ್ರವೇನು ಇರುವುದಿಲ್ಲವೆಂದು ತಿಳಿಸಿ, ಈ ಅಧಿಕಾರವನ್ನು ಬೇರೆಯಾವರಿಗೆ ವಹಿಸಿ ಆದೇಶ ಹೊರಡಿಸುವಂತೆ ಮಹಾಲೇಖಪಾಲರು ಮೇಲೆ ಓದಲಾದ ಕ್ರಮಸಂಖ್ಯೆ: 2 ರ ಪತ್ರದಲ್ಲಿ ಕೋರಿರುತ್ತಾರೆ

ಈ ಹಿನ್ನೆಲೆಯಲ್ಲಿ ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ

**ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ಬೆಂಗಳೂರು, ದಿನಾಂಕ:15.4.2011**

ಈ ಯೋಜನೆಯಡಿಯಲ್ಲಿ ಪರಿಹಾರವನ್ನು ಮಂಜೂರು ಮಾಡುವ ಹಾಗೂ ಅಧಿಕರಿಸಲು ಅನುಸರಿಸಬೇಕಾದ ವಿಧಿವಿಧಾನಗಳು ಕೆಳಕಂಡಂತೆ ಇರತಕ್ಕದೆಂದು ಆದೇಶಿಸಿದೆ

(i) ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ **ಗ್ರೂಪ್ ಡಿ , ಸಿ ಮತ್ತು ಗ್ರೂಪ್ ಬಿ** ಶ್ರೇಣಿಯ ಸರ್ಕಾರಿ ನೌಕರರು/ ಅಧಿಕಾರಿಯು ಸೇವೆಯಲ್ಲಿರುವಾಗ ಮರಣ ಹೊಂದಿದ ವಿಷಯವು ತಲುಪಿದ ನಂತರ, ಕಚೇರಿ ಮುಖ್ಯಸ್ಥನು, ಮೃತ ಸರ್ಕಾರಿ ನೌಕರನ ಕುಟುಂಬಕ್ಕೆ ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ರ ಆದೇಶದ ನಮೂನೆ-ಎ ಯಲ್ಲಿ ಸೂಚಿಸಿರುವ ಮಾಹಿತಿ/ದಾಖಲೆಗಳನ್ನು ಕಳುಹಿಸುವಂತೆ ಕೋರಿ ಪತ್ರವನ್ನು ಕಳುಹಿಸಬೇಕು. ಅದರಲ್ಲಿ ನಮೂದಿಸಿರುವ ಅವಶ್ಯ ದಸ್ತಾವೇಜುಗಳನ್ನು ಸ್ವೀಕರಿಸಿದ ನಂತರ, ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ರ ಕಂಡಿಕೆ 5 ರನ್ವಯ ಪರಿಶೀಲಿಸಿ, ವಾಸ್ತವವಾಗಿ ಸಲ್ಲಿಸಿರುವ ಅರ್ಹದಾಯಕ ಸೇವೆಯನ್ನು, ನೌಕರನ ಸೇವಾ ಪುಸ್ತಕ/ಸೇವಾ ದಾಖಲೆಗಳ ಮೂಲಕ ಖಚಿತಪಡಿಸಿಕೊಂಡ ನಂತರ, ಪರಿಹಾರವನ್ನು ನಮೂದಿಸಿ, ಇಲಾಖಾ ಮುಖ್ಯಸ್ಥರಿಗೆ ದಾಖಲೆಗಳನ್ನು ಕಳುಹಿಸಬೇಕು. ಇಲಾಖೆಯ ಮುಖ್ಯಸ್ಥರುಗಳು ಮತ್ತೊಮ್ಮೆ, ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ಅಧಿಕಾರಿ/ನೌಕರರು ರ ಕಂಡಿಕೆ 5 ರನ್ವಯ ಪರಿಶೀಲಿಸಿ, ವಾಸ್ತವವಾಗಿ ಸಲ್ಲಿಸಿರುವ ಅರ್ಹದಾಯಕ ಸೇವೆಯನ್ನು ದಾಖಲೆಗಳ ಮೂಲಕ ಖಚಿತಪಡಿಸಿಕೊಂಡು , ಮೃತ ನೌಕರರಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಮೊಬಲಗು ಹಾಗೂ ಅವರಿಂದ ಬರಬೇಕಾದ ಬಾಕಿ ಮತ್ತು ಇತರೇ ಮುಂಗಡಗಳ ಬಾಕಿ ಮೊಬಲಗನ್ನು ಪರಿಹಾರ ಮೊತ್ತದಲ್ಲಿ ಹೊಂದಾಣಿಕೆ ಮಾಡಿಕೊಂಡು ಉಳಿದ ಮೊಬಲಗನ್ನು **ನಮೂನೆ-ಬಿ** ಯಲ್ಲಿರುವಂತೆ ಪರಿಹಾರವನ್ನು ಮಂಜೂರು ಮಾಡಿ ಪರಿಹಾರವನ್ನು ಅಧಿಕರಿಸಬೇಕು (will authorize) . ಹೀಗೆ ಅಧಿಕರಿಸಿದ ಮೊಬಲಗನ್ನು ಏಕಗಂಟಿನಲ್ಲಿ ಸಂಬಂಧಪಟ್ಟ ಖಜಾನೆ ಮೂಲಕ ಸಂದಾಯ ಮಾಡತಕ್ಕದ್ದು.

(ii) ಇನ್ನು,**ಗ್ರೂಪ್ ಎ** ಶ್ರೇಣಿಯ ಸರ್ಕಾರಿ ನೌಕರರಿಗೆ ಸಂಬಂದಿಸಿದಂತೆ ಆಯಾ ಇಲಾಖೆಯ ಮುಖ್ಯಸ್ಥರುಗಳು ಮೃತ ಸರ್ಕಾರಿ ನೌಕರನ ಕುಟುಂಬಕ್ಕೆ ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ರ ಆದೇಶದ ನಮೂನೆ-ಎ ಯಲ್ಲಿ ಸೂಚಿಸಿರುವ ಮಾಹಿತಿ/ದಾಖಲೆಗಳನ್ನು ಕಳುಹಿಸುವಂತೆ ಕೋರಿ ಪತ್ರವನ್ನು ಕಳುಹಿಸಬೇಕು ಮತ್ತು ಅದರಲ್ಲಿ ನಮೂದಿಸಿರುವ ಅವಶ್ಯ ದಸ್ತಾವೇಜುಗಳನ್ನು ಸ್ವೀಕರಿಸಿದ ನಂತರ, ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ರ ಕಂಡಿಕೆ 5 ರನ್ವಯ ಪರಿಶೀಲಿಸಿ, ವಾಸ್ತವವಾಗಿ ಸಲ್ಲಿಸಿರುವ ಅರ್ಹದಾಯಕ ಸೇವೆಯನ್ನು

-3-

ನೌಕರನ ಸೇವಾ ಪುಸ್ತಕ/ಸೇವಾ ದಾಖಲೆಗಳ ಮೂಲಕ ಖಚಿತಪಡಿಸಿಕೊಂಡ ನಂತರ, ನಮೂನೆ-ಬಿ ಯಲ್ಲಿರುವಂತೆ ಪರಿಹಾರವನ್ನು ನಮೂದಿಸಿ, ಆಯಾ ಸಚಿವಾಲಯದ ಇಲಾಖಾ ಕಾರ್ಯದರ್ಶಿಗಳಿಗೆ ದಾಖಲೆಗಳನ್ನು ಕಳುಹಿಸಬೇಕು. ಇಲಾಖಾ ಕಾರ್ಯದರ್ಶಿಗಳು ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ಅಧಿಕಾರಿ/ನೌಕರರು ರ ಕಂಡಿಕೆ 5 ರನ್ವಯ ಪರಿಶೀಲಿಸಿ, ವಾಸ್ತವವಾಗಿ ಸಲ್ಲಿಸಿರುವ ಅರ್ಹದಾಯಕ ಸೇವೆಯನ್ನು ದಾಖಲೆಗಳ ಮೂಲಕ ಖಚಿತಪಡಿಸಿಕೊಂಡು, ಮೃತ ನೌಕರರಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಮೊಬಲಗು ಹಾಗೂ ಅವರಿಂದ ಬರಬೇಕಾದ ಬಾಕಿ ಮತ್ತು ಇತರೇ ಮುಂಗಡಗಳ ಬಾಕಿ ಮೊಬಲಗನ್ನು ಪರಿಹಾರ ಮೊತ್ತದಲ್ಲಿ ಹೊಂದಾಣಿಕೆ ಮಾಡಿಕೊಂಡು ಉಳಿದ ಪರಿಹಾರವನ್ನು ನಮೂನೆ-ಬಿ ಯಲ್ಲಿರುವಂತೆ ಪರಿಹಾರವನ್ನು ಮಂಜೂರು ಮಾಡಿ ಅಧಿಕರಿಸಬೇಕು (will authorize). ಹೀಗೆ ಅಧಿಕರಿಸಿದ ಮೊಬಲಗನ್ನು ಏಕಗಂಟಿನಲ್ಲಿ ಸಂಬಂದಪಟ್ಟ ಖಜಾನೆ ಮೂಲಕ ಸಂದಾಯ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ. ನಾರಾಯಣ) 5/4/11
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-1).
ದೂರವಾಣಿ ಸಂಖ್ಯೆ: 22033135

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುದ್ರಿತ ಪ್ರಕಟಣೆಯಲ್ಲಿ ಪ್ರಕಟಿಸುವುದು ಹಾಗೂ [illegible] 00 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡುವುದು

ಇವರಿಗೆ:

ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ
ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು/ವಿಶೇಷ ಕಾರ್ಯದರ್ಶಿಗಳು
ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳಿಗೆ
ಹಾಗೂ ಅಧೀನ ಕಾರ್ಯದರ್ಶಿಗಳಿಗೆ
[illegible]

4. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು. ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ.
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
7. ಮಹಾಲೇಖಪಾಲರು (ಲೆಕ್ಕಪತ್ರ:ಲೆಕ್ಕ ಪರಿಶೋಧನೆ: ಜಿ.ಎಂ.ಶಾಖೆ),ಕರ್ನಾಟಕ, ಬೆಂಗಳೂರು.
8. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.
9. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಲೋಕಯುಕ್ತ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ಬೆಂಗಳೂರು.
13. ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.
14. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
15. ಅಧ್ಯಕ್ಷರು,ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು
16. ಕರ್ನಾಟಕ ಸರ್ಕಾರಿ ಸಚಿವಾಲಯದ ಎಲ್ಲಾ ಶಾಖೆಗಳು.
17. ಕರ್ನಾಟಕ ಸರ್ಕಾರಿ ಸಚಿವಾಲಯ ಗ್ರಂಥಾಲಯ: ವಿಧಾನ ಮಂಡಲ ಗ್ರಂಥಾಲಯ
18. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ (ಎಲ್ಲಾ ಜಿಲ್ಲಾ ಖಜಾನೆಗಳು).
19. ವಾರಪತ್ರ.

[ಕ್ರಮ ಸಂಖ್ಯೆ:7 ರಿಂದ 13 ರವರೆಗೆ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ].

ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ www.finance.kar.nic.in ವೀಕ್ಷಿಸಿ.

Hema 16.8.2011

12

**PROCEEDINGS OF THE GOVERNMENT OF KARNATAKA**

Subject:-Procedure for withdrawal of NPS amount at the time of Superannuation or before superannuation and death while in service.

READ:- 1 G.O No FD (Spl)04 PET 2005, Bangalore, dated 31 03 2006

2 G.O No.FD (Spl)28 PEN 2009, Bangalore dated 29 03 2010

3 G.O No.FD (Spl)01 PEN 2010 Bangalore, dated 20 10 2010

4 G.O No FD (Spl) 203 PEN 2012, Bangalore, dated 16 01 2013

5 G.O No FD(Spl) 203 PEN 2012, Bangalore dated 30 07 2014

6 Circular No:FD(Spl)203 PEN 2012(Part) Bengaluru, dated 21.05.2015.

7 Letter No.DOT/NPS/17/2011-12,Dt:14 1 2016 of Director of Treasuries, Bengaluru

*****

**PREAMBLE:**

Government of Karnataka has introduced a New Defined Contribution Pension system for its employees who joined/join Government service on or after 01-04-2006 in G.O. read at (1) above and it was operationalised from 01/04/2010 in G.O. read at (2) above. NPS is made applicable for the members of the All India Services Officers (Karnataka Cadre) joining the All India Services on or after 01/01/2004 in G.O read at (3) above.

According to para 4 & 1(F) of G.O. read at (1) & (3) above, Government employees who are under NPS shall at the time of superannuation i.e., at the time of exit from service, be mandatorily required to invest 40% of accumulated amount in the Permanent Retirement Account (PRA) towards purchase of an annuity to facilitate for payment of pension to the employee. As per para (5) of the said G.O. the NPS employees of Government who leave the scheme before attaining the age of superannuation, the mandatory annuitization rate shall be 80% of the total accumulated amount in the Permanent Retirement Account (PRA) for making payment of pension. Detailed procedure for settlement of accumulated pension corpus to the nominee/family members/legal heirs of NPS employee whose death occurred while in service is issued in the G.O read at (5) above. In the Circular read at (6) above, detailed procedure for withdrawal of entire NPS amount, on superannuation if accumulated pension amount is equal to or less than Rs. 2,00,000 is issued.

As per the notification of PFRDA (Exit and withdrawal under NPS) Regulations 2015 which was issued on 11th May 2015, the procedures/conditions for exit from NPS in case of superannuation and other than superannuation is slightly changed. Hence

the Director of Treasuries, in letter read at (7) above has sent a proposal to Government for detailing the procedure for withdrawal of accumulated NPS amount of Government Employees is more than Rs. 2,00,000/- at the time of superannuation and to issue a revised order as per PFRDA regulations by superseding G.Os and Circulars read at (4), (5) and (6) above.

Therefore, after examining all these aspects Government has decided to order as follows

**GOVERNMENT ORDER NO: FD (Spl) 203 PEN 2012(P)**
**BENGALURU, DATED: 18.05.2016**

In supersession of G.O. No.FD (Spl) 203 PEN 2012, dated:16.01.2013 and G.O. No. FD (Spl) 203 PEN 2012, dated:30.7.2014 and Circular No:FD(Spl)203 PEN 2012(Part) Bengaluru, dated 21.05.2015, Government issues this Order for withdrawal of accumulated NPS amount in Permanent Retirement Account of Government employees at the time of superannuation/resignation/death while in service, for employees who have joined/join the Government service on or after **01/04/2006** and Officers who have joined/join All India Services on or after 01/01/2004 borne on Karnataka cadre.

A. **<u>WHERE THE SUBSCRIBER RETIRES AT THE AGE OF SUPERANNUATION</u>**:-

40%of the accumulated pension corpus of the subscriber shall to be utilized for purchase of an annuity providing for the monthly pension of the subscriber and the balance 60% shall be paid as lump sum to the subscriber. In default annuity scheme/contract, monthly pension shall be paid for life of the subscriber and his/her spouse (if any) with provision for return of purchase price of the annuity, upon death of such subscriber/spouse, be re-issued to the family members in the order specified hereunder at a rate prevalent at the time of purchase of such annuity.

(a) Living dependent mother of the deceased subscriber.

(b) Living dependent father of the deceased subscriber.

After the coverage of all the family members specified above, the purchase price will be returned to the surviving children of the subscriber and in the absence of children, the legal heirs of the subscriber.

In case the accumulated pension wealth in the permanent Retirement Account of the subscriber who retires at the time of superannuation is equal to or less than a sum of two lakh rupees, the subscriber shall have the option to withdraw the entire accumulated pension wealth without purchasing annuity. In such cases the subscriber will not be eligible for any pension under the scheme



14

B. <u>WHERE THE SUBSCRIBER WHO, BEFORE ATTAINING THE AGE OF SUPERANNUATION RESIGNS FROM GOVERNMENT SERVICE FOR OTHER REASONS:-</u>

80% of the accumulated pension wealth of the subscriber shall mandatorily be utilized for purchase of annuity and the balance of 20% shall be paid to the subscriber in lump sum In default annuity scheme/contract, monthly pension shall be paid for life of the subscriber and his/her spouse (if any) with provision for return of purchase price of the annuity, upon death of such subscriber/spouse, be re-issued to the family members in the order specified hereunder at a rate prevalent at the time of purchase of such annuity.

(a) Living dependent mother of the deceased subscriber

(b) Living dependent father of the deceased subscriber.

After the coverage of all the family members specified above, the purchase price will be returned to the surviving children of the subscriber and in the absence of children, the legal heirs of the subscriber.

If the accumulated pension wealth in the Permanent Retirement Account of the employee who leave the scheme before attaining the age of superannuation is equal to or less than one lakh rupees, the subscriber shall have the option to withdraw the entire accumulated pension wealth without purchasing annuity.

C. <u>IN CASE OF EMPLOYEE WHO, BEFORE ATTAINING THE AGE OF SUPERANNUATION DIES WHILE IN SERVICE:</u>

The accumulated pension wealth of the subscriber is more than two lakh rupees, 80% of the accumulated pension wealth of the subscriber shall be mandatorily utilized for purchase of annuity and balance of 20% shall be paid as lump sum to the nominee or nominees or legal heirs as the case may be, of such employee. In this case, pension shall be provided for life of the spouse of the subscriber with provision of return of purchase price of the annuity, upon the death of such spouse be re-issued to the family members in the order specified hereunder at a prevalent rate at the time of purchase of the annuity

(a) Living dependent mother of the deceased subscriber

(b) Living dependent father of the deceased subscriber.

After the coverage of all the family members specified above, the purchase price will be returned to the surviving children of the subscriber and in the absence of children the legal heirs of the subscriber

If the accumulated pension wealth in the PRA of the employee at the time of his or her death is equal or less than two lakh rupees, the nominee legal heirs shall have the option to withdraw the entire accumulated pension wealth without requiring to purchase any annuity and upon such exercise, family members shall not be eligible for any pension under the NPS Scheme

The procedure to be followed for withdrawal as per existing PFRDA Exit Rules in all the above cases, are detailed in the annexure to this G.O. and may stand modified from time to time as per PFRDA guidelines.

By Order and in the name of the
Governor of Karnataka.

(R.VASANTHA) 18.5.16
Under Secretary to Government
Finance Department (Pension &FCC)

To

1. The Principal Accountant General (A&E), Karnataka, Bengaluru
2. All Principal Secretaries/ Secretaries to Government.
3. Secretary, State Legislature, Bengaluru.
4. Secretary, Karnataka Public Service Commission, Bengaluru.
5. Controller, State Accounts Department,T.T.M.C Building, 3rd Floor, B.M.T.C Shanthinagara, Bengaluru-560 027.
6. Registrar, Karnataka Lokayukta, Bengaluru.
7. Registrar, High Court of Karnataka; Bengaluru.
8. Registrar, Karnataka Administrative Tribunal, Bengaluru
9. All Heads of Departments &DDOs.
10. All Deputy Commissioners of Districts.
11. All Divisional Commissioners.
12. All Chief Executive Officers of Zilla Panchayats.
13. Director of Treasuries, Bengaluru & District Treasury Officers & Sub-Treasury Officers.
14. Weekly Gazette.
15. All sections of Karnataka Government Secretariat, Bengaluru.
16. President, Karnataka Government Employees Union, Cubbon Park
17. Karnataka Government Secretariat Library/Legislature Library.
18. Section Guard File.
19. Spare copies.

**Visit, the Official Website of Finance Department, GOK: www.finance.kar.nic.in**



16

## Annexure to the G.O

1. Retiring/retired Employee shall report missing credits (NPS amount deducted from salary but not reflected in PRA) if any in his PRA to the Treasury officer through his DDO.

2. Treasury Officer shall trace the missing credit. (i.e. NPS amount deducted from employee's salary but not credited to his PRA) and arrange to credit the same to employee's PRA together with matching Government contribution. If the missing credit happens to be with other Treasury, present Treasury officer shall refer the same to the concerned Treasury Officer and ask him to arrange to credit the missing contribution to the employee's PRA. However there shall not be any claim from the employee for compensating any loss due to the missing credit

3. Retiring/retired employee shall submit his/her application for withdrawal from PRA after ensuring that there are no missing credits in the enclosed format to his/her DDO.

4. No recovery shall be made under NPS for last 3 months of normal superannuation. If it is recovered, same shall be settled by the concerned employer at their end by drawing through payees receipt under the HOA 8342 00 117 through concerned Treasury. Govt contribution for the said three months shall be drawn on payees receipt (CTS 8) by the concerned DDO from the Treasury by debiting HOA 2071-01-117-0-01.

5. Pension or accumulated pension wealth in the Tier-I account of the permanent retirement account of the NPS subscribers under National Pension System on account of past services or present services shall not be liable to seizure, attachment or sequestration by process of any Court at the instance of a creditor, for any demand against the subscriber, or in satisfaction of a Decree or Order of any such Court

6. Government/Appointing Authority shall have the right of withholding the co-contributions made by the State Government as employer to the Tier-I account of the National Pension System account (PRA) of the employee and without any investment income accruing thereon, in the event of recovery of the whole or part of any pecuniary loss caused to the Government, if, in any departmental or judicial proceedings, the government servant is found guilty of grave misconduct or negligence during the period of service under the relevant service rules. However, such right of withholding shall have to be effected before the date of normal superannuation of the employee pursuant to a notice to be given to the National Pension System Trust, seeking to

withhold the said co-contributions from the accumulated pension wealth of the subscriber and providing the evidence thereof on the related matter.

7. Three months prior to the exit from service upon superannuation or before the age of superannuation of the employee, he/she has to submit the duly filled in withdrawal form along with supporting documents to his/her DDOs - **Employee also has the option to initiate withdrawal request in CRA website**.

8. The required documents to be submitted to DDOs are:

   a. Original PRAN Card / notarized affidavit in case if the original is not submitted.
   b. Photo ID proof
   c. Residence proof
   d. ~~Cancelled cheque/bank certificate/copy of the bank passbook~~ with photograph and all the other details like IFS Code. Account no, Branch address and Code.
   e. Direct credit mandate
   f. Annuity application form duly filled and signed by subscriber
   g. Death certificate in original, if the claim is for the benefits arising out of the death of the retired subscriber. Death certificate should be in English. If the Death certificate is in the language other than English or Hindi, the Treasury officer shall translate the same into English language and should be duly attested by the Treasury officer.
   h. Legal heir certificate in English wherever applicable
   i. Relieving letter and NOC, if applicable.

9. On receipt of duly filled and attested withdrawal forms along with required documents, DDO shall verify the withdrawal forms with supporting documents and service details and details of the credits in Schedule of Transactions (SOT) of CRA and after verification submit to the concerned Treasury officer along with No due certificate in duplicate within 10 working days from receipt of such application. A copy of all documents must be filed in personal file of the employee.

10. On receipt of duly attested withdrawal form along with required documents, Treasury Officer shall verify the DDO signature and DDO details, NPS contribution details available in HRMS/Khajane and statement of Transaction and statement of holding in CRA system. After due verification, Treasury Officer shall initiate the request in CRA website (cra-nsdl.com) and authorized the same. Treasury Officer will forward the withdrawal form along with required documents to NPS claim processing cell at CRA



18

11 **On receipt of the claim request through online,** NPS claim processing cell at CRA will process the forms and instruct PFMs & Trustee Bank to transfer the 60% of accumulated amount in one lump sum to the bank account of the employee. (20% in case of exit before superannuation i.e. resignation, death while in service etc.). The CRA gives the intimation to concerned employee through e-mail, Mobile message and through e-mail to Treasury Officer and NPS cell. CRA shall provide weekly MIS for PRANS exited to NPS cell

12 NPS claim processing cell at CRA will forward Annuity form to selected Annuity Service Provider (ASP) and crediting the ASP account with the 40% 80% in case of before superannuation i.e. resignation, death while in service etc.,) of accumulated amount in case of superannuation as per the instructions provided in the withdrawal application form by the employee. Once an investment is made in the annuity by way of purchase of annuity, the option of cancellation and reinvestment with another annuity service provider or in another annuity scheme shall not be allowed unless the same is within the time period specified by the Annuity Service Provider as provided in the terms of the contract or unless specifically provided by Insurance Regulatory Development Authority. If any of the PFRDA's empanelled Annuity service provider has not been selected by the employee, the default annuity service provider and default annuity scheme applicable for subscribers exiting from National Pension System shall be as decided by the Authority.

13. In default annuity scheme/contract monthly pension for life of the subscriber and his/her spouse (if any) with provision for return of purchase price of the annuity and upon death of such subscriber/spouse, the annuity be re-issued to the family members in the order specified hereunder at a rate prevalent at the time of purchase of such annuity.

(a) Living dependent mother of the deceased subscriber,

(b) Living dependent father of the deceased subscriber.

After the coverage of all the family members specified above, the purchase price will be returned to the surviving children of the subscriber and in the absence of children the legal heirs of the subscriber

14 The subscriber has the option to defer the withdrawal of the lump sum amount after purchase of mandatory annuity until he or she attains the age of seventy years by submitting specified request form at least 15 days before the attainment of age of superannuation to the NPS Trust or entity authorized by the Authority for this purpose

15 The subscriber also has the option to defer the purchase of annuity for a maximum period of three years from the date of attainment of age of superannuation by submitting specified request form at least 15 days before the attainment of superannuation to the NPS Trust or entity authorized by the Authority for this purpose In case if death occurs before such due date of

purchase of an annuity after the deferment, the annuity shall be mandatorily purchased by the spouse providing for pension for life of the spouse with provision for return of purchase price of the annuity, upon death of such spouse and be re-issued to the family members in the order of preference as mentioned in Para 13.

16. Where the subscriber desires or opts to defer the withdrawal of lump sum or the purchase of annuity only with the condition that the subscriber agrees to bear the maintenance charges of the Permanent Retirement Account including charges payable to the CRA, Pension Fund, Trustee Bank as may be applicable from time to time.

17. CRA shall inform the details of funds settled to NPS cell and concerned Treasury Officer in the following format :

| PRAN | Employee Name | PAO Reg. No. | Treasury | DDO Reg. No | Present DDO code | DOJ service | Date of Retirement of employee |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |

| Date of inactivation of PRAN in CRA system | Pension corpus available with the PRAN at the time of inactivation | Cheque Amount | Mandate date/ Cheque date and number | Account number to which cheque is being sent | IFSC Code and name of the bank in which Retiring employee has the account | Name and address of the employee |
|---|---|---|---|---|---|---|
| 9 | 10 | 11 | 12 | 13 | 14 | 15 |

| Annuitized Amount | Annuity Scheme | Nominee/legal heirs | Address of Nominee/legal heirs | Bank account No. of the Nominee/ Legal heir |
|---|---|---|---|---|
| 16 | 17 | 18 | 19 | 20 |

Forms to be submitted while Exit from service on attaining the age of normal superannuation along with required documents specified above in para 8

1. **Form 101-GS** – Withdrawal form for claiming of accumulated amount on superannuation for Government employees.

2. **Form 101-GS-N1** – Annexure for Nomination Details

   The details of nominees to whom the outstanding accumulated amount of the employee is payable in case of the death of the employee before withdrawing of entire NPS accumulated amount and if an employee opts for phased withdrawal, all the outstanding accumulated amount out of



20

the phased lump sum withdrawal in the account of the subscriber will be paid to the nominees as mentioned in this form and the same would be treated as final discharge of the obligation from selected ASP. For the purpose of nomination, the family means

i) In case of male employee, his wife, his children whether married or not, his dependent parents and his deceased son's widow and children.

i) In case of female employee, her husband, her children whether married or not, her dependent parents, her husband's dependent parents and her deceased son's widow and children.

3 If the employee is Non IRA complaint he has to submit duly filled Annexure S1. No PRAN card issue activity will be undertaken

4 The employee has to submit 'Affidavit' as per Annexure III in case of missing PRAN card

Forms to be submitted while Exit from service before the age of normal superannuation along with required documents specified above in Para 8.

1 The employee will submit duly filled S1 form to the concerned Treasury Officer through DDO for enabling the complete data capture in CRA system. No PRAN card issue activity will be undertaken (in case of NON IRA compliant subscribers).

2 The subscriber has to submit 'Affidavit' as per Annexure III in case of missing PRAN card.

3 **Form 102-GP** - withdrawal form for claim of Accumulated pension wealth on exit from service before attaining the age of normal superannuation for Government employees

Forms to be submitted while Exit from service before the age of normal superannuation along with required documents specified above in Para 8.

18 **Form 103-GD** - withdrawal form for claiming of Accumulated pension wealth by the family members at the time of death of an employee while in service

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ಅಧಿಕಾರಿ/ನೌಕರರು ನಿವೃತ್ತಿ, ಮರಣ, ರಾಜೀನಾಮೆ ಸಂದರ್ಭದಲ್ಲಿ ಪ್ರಾನ್ ಖಾತೆಯಲ್ಲಿನ ಮೊತ್ತವನ್ನು ಹಿಂಪಡೆಯುವ ಕುರಿತು

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಆಇ (ವಿ) 203 ಪಿಇಎನ್ 2012 (ಭಾ), ದಿನಾಂಕ:18.05.2016.
2. PFRDA (Exits and Withdrawals under the NPS (Amendment) Regulation, 2021, ದಿನಾಂಕ: 14.06.2021
3. ಖಜಾನೆ ಆಯುಕ್ತರ ಪತ್ರ ಸಂಖ್ಯೆ: ಖಆ/ಎನ್.ಪಿ.ಎಸ್./EXIT/01/2021-22, ದಿನಾಂಕ: 18.08.2021.

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರು ನಿವೃತ್ತರಾದರೆ/ಸೇವೆಯಲ್ಲಿ ಇರುವಾಗಲೇ ಮೃತರಾದರೆ / ರಾಜೀನಾಮೆ ನೀಡಿದ ಸಂದರ್ಭದಲ್ಲಿ ಅವರುಗಳ ಪ್ರಾನ್ ಖಾತೆಯಲ್ಲಿನ ಮೊತ್ತವನ್ನು ಈ ಕೆಳಕಂಡಂತೆ ಇತ್ಯರ್ಥಪಡಿಸಲಾಗುತ್ತಿದೆ:-

a. ನೌಕರರು ಸೇವೆಯಲ್ಲಿರುವಾಗಲೇ **ಮೃತರಾದರೆ** ಪ್ರಾನ್ ಖಾತೆಯಲ್ಲಿ ರೂ. 2.00 ಲಕ್ಷಕ್ಕಿಂತ ಕಡಿಮೆ ಮೊತ್ತವಿದ್ದರೆ ನೌಕರರ ನಾಮ ನಿರ್ದೇಶಿತರಿಗೆ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು ಹಾಗೂ ಪ್ರಾನ್ ಖಾತೆಯಲ್ಲಿನ ಮೊತ್ತವು ರೂ.2.00 ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ ಪ್ರಾನ್ ಖಾತೆಯಲ್ಲಿರುವ 20% ಮೊತ್ತವನ್ನು ನೌಕರರ ನಾಮನಿರ್ದೇಶಿತರು ಹಿಂಪಡೆಯಬಹುದಾಗಿದ್ದು, ಉಳಿದ 80% ಮೊತ್ತವನ್ನು ಮಾಸಿಕ ಪಿಂಚಣಿಗಾಗಿ ASP ಯಲ್ಲಿ ಹೂಡಿಕೆ ಮಾಡಬೇಕಿರುತ್ತದೆ.

b. ಎನ್.ಪಿ.ಎಸ್. ಯೋಜನೆಯಡಿ **ನಿವೃತ್ತಿ ಹೊಂದಿದ** ನೌಕರರ ಪ್ರಾನ್ ಖಾತೆಯಲ್ಲಿ ರೂ.2.00 ಲಕ್ಷಕ್ಕಿಂತ ಕಡಿಮೆ ಮೊತ್ತವಿದ್ದರೆ ನೌಕರರಿಗೆ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು ಹಾಗೂ ಪ್ರಾನ್ ಖಾತೆಯಲ್ಲಿನ ಮೊತ್ತವು ಎರಡು ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ ಪ್ರಾನ್ ಖಾತೆಯಲ್ಲಿರುವ 60% ಮೊತ್ತವನ್ನು ನೌಕರರು ಹಿಂಪಡೆಯಬಹುದಾಗಿದ್ದು, ಉಳಿದ 40% ಮೊತ್ತವನ್ನು ಮಾಸಿಕ ಪಿಂಚಣಿಗಾಗಿ Annuity Service Provider ಯಲ್ಲಿ ಹೂಡಿಕೆ ಮಾಡಬೇಕಿರುತ್ತದೆ.

c. ಎನ್.ಪಿ.ಎಸ್. ಯೋಜನೆಯಡಿ ಸೇವೆಗೆ **ರಾಜೀನಾಮೆ ನೀಡಿದ** ನೌಕರರ ಪ್ರಾನ್ ಖಾತೆಯಲ್ಲಿ ರೂ.1.00 ಲಕ್ಷಕಿಂತ ಕಡಿಮೆ ಮೊತ್ತವಿದ್ದರೆ ನೌಕರರ ಪ್ರಾನ್ ಖಾತೆಯಲ್ಲಿನ ಸಂಪೂರ್ಣ ಮೊತ್ತವನ್ನು ಇತ್ಯರ್ಥ ಪಡಿಸಲಾಗುವುದು. ನೌಕರರ ಪ್ರಾನ್ ಖಾತೆಯಲ್ಲಿನ ಮೊತ್ತವು ರೂ. 1.00 ಲಕ್ಷಕಿಂತ ಮೇಲ್ಪಟ್ಟಿದ್ದರೆ ಶೇ. 20 ರಷ್ಟು ಮೊತ್ತವನ್ನು ನೌಕರರು ಹಿಂಪಡೆಯಬಹುದಾಗಿದ್ದು, ಉಳಿಕೆ ಶೇ. 80 ರಷ್ಟು ಮೊತ್ತವನ್ನು ಮಾಸಿಕ ಪಿಂಚಣಿಗಾಗಿ ASPಯಲ್ಲಿ ಹೂಡಿಕೆ ಮಾಡಬೇಕಿರುತ್ತದೆ.

ಮೇಲೆ ಓದಲಾದ (3) ರ ಖಜಾನೆ ಆಯುಕ್ತರ ಪತ್ರದಲ್ಲಿ ಎನ್.ಪಿ.ಎಸ್. ಯೋಜನೆಗೆ ಒಳಪಡುವ ಅಧಿಕಾರಿ/ನೌಕರರು ನಿವೃತ್ತಿ, ಮರಣ, ರಾಜೀನಾಮೆ ಇಂತಹ ಸಂದರ್ಭದಲ್ಲಿ ತಮ್ಮ ಪ್ರಾನ್ ಖಾತೆಯಲ್ಲಿನ ಮೊತ್ತವನ್ನು ಹಿಂಪಡೆಯುವ ಪ್ರಕ್ರಿಯೆಯಲ್ಲಿ ಪಿ.ಎಫ್.ಆರ್.ಡಿ.ಎ. ರವರ PFRDA (Exits and Withdrawals under the NPS (Amendment) Regulation, 2021, ದಿನಾಂಕ: 14.06.2021ರಲ್ಲಿರುವಂತೆ ರಾಜ್ಯ ಸರ್ಕಾರದಲ್ಲಿಯೂ ಸಹ ಎನ್.ಪಿ.ಎಸ್. ಮೊತ್ತವನ್ನು ಹಿಂಪಡೆಯುವ ಪ್ರಕ್ರಿಯೆಯಲ್ಲಿ ಮಾರ್ಪಾಡು ಮಾಡಿ ಆದೇಶವನ್ನು ಹೊರಡಿಸುವಂತೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಆಇ 201 ಪಿಇಎನ್ 2021, ಬೆಂಗಳೂರು,</u>**
**<u>ದಿನಾಂಕ: 29.11.2021</u>**

ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ಅಧಿಕಾರಿ/ನೌಕರರು ನಿವೃತ್ತಿ, ಮರಣ, ರಾಜೀನಾಮೆ ಇಂತಹ ಸಂದರ್ಭದಲ್ಲಿ ತಮ್ಮ ಪ್ರಾನ್ ಖಾತೆಯಲ್ಲಿನ ಮೊತ್ತವನ್ನು ಹಿಂಪಡೆಯುವ ಪ್ರಕ್ರಿಯೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆಇ (ವಿ) 203 ಪಿಇವಿನ್ 2012 (ಭಾ), ದಿನಾಂಕ:18.05.2016ರಲ್ಲಿರುವ ಗರಿಷ್ಠ ಮೊತ್ತವನ್ನು ಪಿ.ಎಫ್.ಆರ್.ಡಿ.ಎ. ರವರು ಮಾರ್ಪಡಿಸಿರುವ ರೀತಿಯಲ್ಲಿ ರಾಜ್ಯ ಸರ್ಕಾರವು ಈ ಕೆಳಕಂಡಂತೆ ಮಾರ್ಪಡಿಸಿ ಆದೇಶಿಸಿದೆ:-

| ಕ್ರ. ಸಂ. | ಹಿಂಪಡೆಯುವ ವಿಧಾನ | ಎನ್.ಪಿ.ಎಸ್. ಕಾರ್ಪಸ್ ನಲ್ಲಿ ಹಳೆಯ ಮಿತಿ (Less than or equal to) | ಎನ್.ಪಿ.ಎಸ್. ಕಾರ್ಪಸ್ ನಲ್ಲಿ ಹೆಚ್ಚಿಸಿರುವ ಮಿತಿ (Less than or equal to) |
|---|---|---|---|
| 1 | ನಿವೃತ್ತಿ | ರೂ. 2 ಲಕ್ಷಗಳು | ರೂ. 5 ಲಕ್ಷಗಳು |
| 2 | ಮರಣ | ರೂ. 2 ಲಕ್ಷಗಳು | ರೂ. 5 ಲಕ್ಷಗಳು |
| 3 | ರಾಜೀನಾಮೆ | ರೂ. 1 ಲಕ್ಷ | ರೂ. 2.5 ಲಕ್ಷಗಳು |

ಇನ್ನುಳಿದಂತೆ ಸರ್ಕಾರದ ಆದೇಶ ದಿನಾಂಕ: 18.05.2016ರಲ್ಲಿನ ಷರತ್ತು/ನಿಬಂಧನೆಗಳು ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕುಮಟಾ ಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ ಮತ್ತು
ಆರ್ಥಿಕ ಆಯೋಗ ಕೋಶ).
29/11/2021

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ.

ಪ್ರತಿ:-

1. ಮಹಾಲೇಖಪಾಲರು (ಎ ಮತ್ತು ಇ) / ಪ್ರಧಾನ ಮಹಾಲೇಖಪಾಲರು / ಲೆಕ್ಕಪರಿಶೋಧಕರು - ಬೆಂಗಳೂರು

2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
5. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್. ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಪಂಚಾಯತ್ ರಾಜ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು.
9 ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
10. ಜಂಟಿ ನಿರ್ದೇಶಕರು, ನೂತನ ಪಿಂಚಣಿ ಯೋಜನೆ ಘಟಕ, 5 ಮತ್ತು 6ನೇ ಮಹಡಿ, ಕೆ.ಪಿ.ಸಿ.ಎಲ್. ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು..
11. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ದೇವರಾಜ್ ಅರಸ್ ರಸ್ತೆ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿನಾಂಕ: 01.4.2006ರಂದು ಮತ್ತು ನಂತರ ಸರ್ಕಾರಿ ಸೇವೆಗೆ ನೇಮಕ ಹೊಂದಿರುವ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ ಒಳಪಡುವ ಸರ್ಕಾರಿ ನೌಕರರಿಗೆ ನಿವೃತ್ತಿ ಮತ್ತು ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರಿ ಆದೇಶ ಸಂಖ್ಯೆ: ಆಇ(ಸ್ಪೆಷಲ್) 04 ಪಿಇಟಿ 2005, ದಿನಾಂಕ: 31.03.2006.

2) ಸರ್ಕಾರಿ ಆದೇಶ ಸಂಖ್ಯೆ: ಆಇ 03 ಸೇನಿಸೇ 2010, ದಿನಾಂಕ: 12.10.2010 ಮತ್ತು 15.04.2011.

3) ~~ಸರ್ಕಾರಿ ಆದೇಶ ಸಂಖ್ಯೆ: ಆಇ 06 ಎಸ್‌ಆರ್‌ಪಿ 2018, ದಿನಾಂಕ: 01.03.2018.~~

ಪ್ರಸ್ತಾವನೆ:–

ಮೇಲೆ ಓದಲಾದ ಸರ್ಕಾರಿ ಆದೇಶ (1)ರಲ್ಲಿ ದಿನಾಂಕ: 01.4.2006ರಂದು ಮತ್ತು ನಂತರ ಸರ್ಕಾರಿ ಸೇವೆಗೆ ಸೇರುವ ನೌಕರರಿಗೆ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯನ್ನು ಕಡ್ಡಾಯಗೊಳಿಸಲಾಗಿದೆ.

ಮೇಲೆ ಓದಲಾದ ಸರ್ಕಾರಿ ಆದೇಶ (2)ರಲ್ಲಿ, ದಿನಾಂಕ: 01.04.2006ರಂದು ಮತ್ತು ನಂತರ ಸರ್ಕಾರಿ ಸೇವೆಗೆ ಸೇರಿದ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ರಾಜ್ಯ ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗಲೇ ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ ಇಡಿಗಂಟಿನ ಪರಿಹಾರವನ್ನು ನೀಡಲು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಉಲ್ಲೇಖ (3)ರ ಸರ್ಕಾರಿ ಆದೇಶದಲ್ಲಿ, 6ನೇ ರಾಜ್ಯ ವೇತನ ಆಯೋಗವು ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ ಒಳಪಡುವ ಸರ್ಕಾರಿ ನೌಕರರಿಗೆ ನಿವೃತ್ತಿ/ಮರಣ ಉಪದಾನ ಸೌಲಭ್ಯವನ್ನು ಹಳೆಯ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ನೌಕರರಿಗೆ ವಿಸ್ತರಿಸಿರುವ ರೀತಿಯಲ್ಲಿಯೇ ವಿಸ್ತರಿಸುವಂತೆ ಮತ್ತು ಸೇವೆಯಲ್ಲಿರುವಾಗಲೇ ನಿಧನರಾಗುವ ಅಂತಹ ನೌಕರರ ಅವಲಂಬಿತ ಕುಟುಂಬಕ್ಕೆ ಕುಟುಂಬ ಪಿಂಚಣಿ ಸೌಲಭ್ಯವನ್ನು ಪರಿಗಣಿಸುವಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಸರ್ಕಾರವು ಒಪ್ಪಿರುವುದರಿಂದ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018, ಬೆಂಗಳೂರು, ದಿನಾಂಕ: 23.06.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿನಾಂಕ: 01.04.2006ರಂದು ಮತ್ತು ನಂತರ ಸರ್ಕಾರಿ ಸೇವೆಗೆ ಸೇರಿದ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ

ಕೊಡುಗೆ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ಈ ಕೆಳಕಂಡಂತೆ ನಿವೃತ್ತಿ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ:

1. ನಿವೃತ್ತಿ ಉಪದಾನ:

ಹಳೆಯ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ನೌಕರರಿಗೆ ವಿಸ್ತರಿಸಿರುವ ರೀತಿಯಲ್ಲಿಯೇ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ನಿವೃತ್ತರಾಗುವ ಸರ್ಕಾರಿ ನೌಕರರಿಗೂ ದಿನಾಂಕ: 01.04.2018ರಿಂದ ಜಾರಿಗೆ ಬರುವಂತೆ ಅನ್ವಯಿಸಿ ನಿವೃತ್ತಿ ಉಪದಾನ ಸೌಲಭ್ಯವನ್ನು ವಿಸ್ತರಿಸಲಾಗಿದೆ ಹಾಗೂ ನಿವೃತ್ತಿ ಉಪದಾನದ ಮೊತ್ತವು ಗರಿಷ್ಠ ಮಿತಿ ರೂ.20.00ಲಕ್ಷಗಳಿಗೊಳಪಟ್ಟಿರುತ್ತದೆ.

2. ಮರಣ ಉಪದಾನ:

2.1 ಹಳೆಯ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ನೌಕರರ ಅವಲಂಬಿತ ಕುಟುಂಬಕ್ಕೆ ವಿಸ್ತರಿಸಿರುವ ರೀತಿಯಲ್ಲಿಯೇ, ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ ಒಳಪಟ್ಟಿದ್ದು ಸೇವೆಯಲ್ಲಿರುವಾಗಲೇ ಮರಣ ಹೊಂದುವ ಸರ್ಕಾರಿ ನೌಕರರ ಅವಲಂಬಿತ ಕುಟುಂಬಕ್ಕೆ ದಿನಾಂಕ: 01-04-2018ರಿಂದ ಜಾರಿಗೆ ಬರುವಂತೆ ಅನ್ವಯಿಸಿ ಮರಣ ಉಪದಾನ ಸೌಲಭ್ಯವನ್ನು ವಿಸ್ತರಿಸಲಾಗಿದೆ ಹಾಗೂ ಮರಣ ಉಪದಾನದ ಮೊತ್ತವು ಗರಿಷ್ಠ ಮಿತಿ ರೂ.20.00ಲಕ್ಷಗಳಿಗೊಳಪಟ್ಟಿರುತ್ತದೆ.

2.2 ದಿನಾಂಕ: 31.03.2018ರ ಪೂರ್ವದಲ್ಲಿ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ನೌಕರರಿಗೆ ಸರ್ಕಾರದ ಆದೇಶ ಸಂಖ್ಯೆ: ಆಇ 03 ಸೇನಿಸೇ 2010, ದಿನಾಂಕ: 12.10.2010 ಮತ್ತು 15.04.2011ರಲ್ಲಿ ಈಗಾಗಲೇ ನೀಡಿರುವ ಇಡಿಗಂಟಿನ ಪರಿಹಾರದ ಸೌಲಭ್ಯವು ಅನ್ವಯಿಸಲಿದ್ದು, ಅದನ್ನು ಪುನರ್ ಪರಿಷ್ಕರಿಸತಕ್ಕದ್ದಲ್ಲ.

2.3 ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ ಒಳಪಟ್ಟಿದ್ದು ಸೇವೆಯಲ್ಲಿರುವಾಗಲೇ ನಿಧನ ಹೊಂದುವ ಅಂತಹ ಸರ್ಕಾರಿ ನೌಕರರ ಅವಲಂಬಿತ ಕುಟುಂಬಕ್ಕೆ ಮರಣ ಉಪದಾನದ ಸೌಲಭ್ಯವನ್ನು ಈ ಆದೇಶಾನುಸಾರ ಪರಿಗಣಿಸಿ ವಿಸ್ತರಿಸಿರುವ ತತ್ಪರಿಣಾಮವಾಗಿ, ಸರ್ಕಾರಿ ಆದೇಶ ಸಂಖ್ಯೆ: ಆಇ 03 ಸೇನಿಸೇ 2010, ದಿನಾಂಕ: 12.10.2010 ಮತ್ತು 15.04.2011 ರನ್ವಯ ವಿಸ್ತರಿಸಲಾಗಿದ್ದ ಇಡಿಗಂಟಿನ ಸೌಲಭ್ಯವನ್ನು ದಿನಾಂಕ: 01.04.2018ರಿಂದ ಅನ್ವಯಿಸಿ ಹಿಂಪಡೆಯಲಾಗಿದೆ.

3. **ಕುಟುಂಬ ಪಿಂಚಣಿ:**

3.1 ದಿನಾಂಕ: 01.04.2018ರಂದು ಅಥವಾ ತದನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ನೌಕರರ ಅವಲಂಬಿತರು ಆಯ್ಕೆ ಮಾಡಿಕೊಂಡಲ್ಲಿ, ಮೃತ ನೌಕರರ ಪಿಂಚಣಿ ನಿಧಿಯಲ್ಲಿ ಕ್ರೋಢೀಕೃತವಾದ ಮೊತ್ತವನ್ನು ಸರ್ಕಾರವು ಹಿಂಪಡೆಯುವ. ಷರತ್ತಿಗೊಳಪಟ್ಟು, ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ಪಿಂಚಣಿ) ನಿಯಮಗಳು, 2002ರನ್ವಯ ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಲಾಗಿದೆ.

3.2 ಈ ಉದ್ದೇಶಕ್ಕಾಗಿ ಮೃತ ಸರ್ಕಾರಿ ನೌಕರನ ಅವಲಂಬಿತರು ನೀಡುವ ಆಯ್ಕೆಯು ಐಚ್ಛಿಕವಾಗಿರುವುದಾಗಿದೆ. ಈ ಮೇರೆಗೆ ಒಮ್ಮೆ ಮೃತ ನೌಕರರ ಪಿಂಚಣಿ ನಿಧಿಯಲ್ಲಿನ ಮೊತ್ತವನ್ನು ಸರ್ಕಾರವು ಹಿಂಪಡೆಯುವ ಇಚ್ಛೆಯೊಂದಿಗೆ ಕುಟುಂಬ ಪಿಂಚಣಿ ಸೌಲಭ್ಯವನ್ನು ಆಯ್ಕೆ ಮಾಡಿಕೊಂಡ ತರುವಾಯದಲ್ಲಿ ಮುಂದಿನ ದಿನಗಳಲ್ಲಿ ಸದರಿ ಆಯ್ಕೆಯನ್ನು ಪರಿಷ್ಕರಿಸಿ ಕುಟುಂಬ ಪಿಂಚಣಿ ಬದಲಿಗೆ ಪಿಂಚಣಿ ನಿಧಿಯಲ್ಲಿನ ಮೊತ್ತವನ್ನು ಪಾವತಿಸುವಂತೆ ಕೋರಿಕೆ ಸಲ್ಲಿಸುವ ಅಥವಾ ಪಿಂಚಣಿ ನಿಧಿಯಲ್ಲಿನ ಮೊತ್ತವನ್ನು ಪಡೆಯಲು ಇಚ್ಛಿಸಿ ಪಡೆದ ತರುವಾಯದಲ್ಲಿ ಮುಂದಿನ ದಿನಗಳಲ್ಲಿ ಸದರಿ ಸೌಲಭ್ಯದ ಬದಲಿಗೆ ಸರ್ಕಾರಕ್ಕೆ ಪಿಂಚಣಿ ನಿಧಿಯಿಂದ ಪಡೆದ ಮೊತ್ತವನ್ನು ಹಿಂಪಾವತಿಸುವ ಮೇರೆಗೆ ಕುಟುಂಬ ಪಿಂಚಣಿ ಸೌಲಭ್ಯವನ್ನು ಕೋರುವಲ್ಲಿ ಅವಕಾಶವಿಲ್ಲ ಮತ್ತು ಈ ಸಂಬಂಧದ ಮಂಜೂರಾತಿ ಸಮಯದಲ್ಲಿ ನೀಡುವ ಆಯ್ಕೆಯೇ ಅಂತಿಮವಾಗಿದ್ದು, ಯಾವುದೇ ಸಂದರ್ಭ/ಕಾರಣಗಳಿಗಾಗಿ ಬದಲಾವಣೆಗೆ ಅವಕಾಶವಿರುವುದಿಲ್ಲ.

ಸಂಬಂಧಪಟ್ಟ ನಿಯಮಗಳಿಗೆ ಪ್ರತ್ಯೇಕವಾಗಿ ಸೂಕ್ತ ತಿದ್ದುಪಡಿಗಳನ್ನು ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
23.6.
(ಪ್ರಕಾಶ್.ವೈ.ಕೆ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವಿಶ್ರಾಂತಿ ವೇತನ).

ಇವರಿಗೆ:

1) ಸರ್ಕಾರದ ಮುಖ್ಯ ಕಾರ್ಯದರ್ಶಿ/ ಅಪರ ಮುಖ್ಯ ಕಾರ್ಯದರ್ಶಿಗಳು.

2) ಸರ್ಕಾರದ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
4) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
5) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
6) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7) ಮಹಾಲೇಖಪಾಲರು (ಲೆಕ್ಕಪತ್ರ / ಲೆಕ್ಕಪರಿಶೋಧನೆ) ಜಿ.ಎಂ ಶಾಖೆ , ಬೆಂಗಳೂರು.
8) ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
10) ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು.
11) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
12) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13) ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು ಮತ್ತು ಎಲ್ಲಾ ಜಿಲ್ಲಾ ಖಜಾನೆಗಳು.
14) ಎಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
15) ಸಂಕಲನಕಾರರು, ಕರ್ನಾಟಕ ಗೆಜೆಟ್‌ನ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ.
16) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ.
17) ಅಧ್ಯಕ್ಷರು, ಕರ್ನಾಟಕ ರಾಜ್ಯ ಎನ್.ಪಿ.ಎಸ್.ನೌಕರರ ಸಂಘ, ಬೆಂಗಳೂರು.
18) ಕರ್ನಾಟಕ ಸರ್ಕಾರದ ಸಚಿವಾಲಯದ ಎಲ್ಲಾ ಶಾಖೆಗಳು.
19) ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ,
20) ವಾರಪತ್ರ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಂತರ್ಜಾಲತಾಣ:

www.finance.kar.nic.in ವೀಕ್ಷಿಸಿ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 80 ವರ್ಷಗಳು ಮತ್ತು ಅದಕ್ಕೂ ಮೇಲ್ಪಟ್ಟ ಎಲ್ಲಾ ರಾಜ್ಯ ಸರ್ಕಾರಿ ಪಿಂಚಣಿದಾರರು / ಕುಟುಂಬ ಪಿಂಚಣಿದಾರರಿಗೆ ಹೆಚ್ಚುವರಿ ಪಿಂಚಣಿ ಮಂಜೂರು ಮಾಡುವ ಬಗ್ಗೆ – 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸನ್ನು ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ : ಸರ್ಕಾರಿ ಆದೇಶ ಸಂಖ್ಯೆ: ಆಇ(ವಿಶೇಷ) 27 ಪಿಇಎನ್ 2007, ದಿನಾಂಕ: 13.10.2010.

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ, ದಿನಾಂಕ:1.7.1993ಕ್ಕಿಂತ ಮುಂಚಿತವಾಗಿ ನಿವೃತ್ತರಾದವರ ಅಥವಾ ಸೇವೆಯಲ್ಲಿರುವಾಗಲೇ ಮೃತರಾದ 80 ವರ್ಷಗಳು ಮತ್ತು ಅದಕ್ಕೂ ಮೇಲ್ಪಟ್ಟ ಪಿಂಚಣಿದಾರರು / ಕುಟುಂಬ ಪಿಂಚಣಿದಾರರಿಗೆ ದಿನಾಂಕ:1.4.2006ರಿಂದ ಜಾರಿಗೆ ಬರುವಂತೆ ಅವರ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನವನ್ನು ಈ ಕೆಳಗಿನ ದರಗಳ ಪ್ರಕಾರ ಮಂಜೂರು ಮಾಡಿ ಆದೇಶ ಹೊರಡಿಸಲಾಗಿರುತ್ತದೆ :

| ದಿನಾಂಕ:01.04.2006 ರಿಂದು ಪಿಂಚಣಿದಾರರ ಮತ್ತು ಕುಟುಂಬ ಪಿಂಚಣಿದಾರರ ವಯಸ್ಸು | ದಿನಾಂಕ: 01.04.2006 ರಿಂದ ಹೆಚ್ಚುವರಿ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನ |
|---|---|
| 1) 80 ರಿಂದ 85 ವಯಸ್ಸಿನ ಒಳಗಿನವರಿಗೆ | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 20ರಷ್ಟು |
| 2) 85 ರಿಂದ 90 ವಯಸ್ಸಿನ ಒಳಗಿನವರಿಗೆ | ಮೂಲ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನದ ಶೇಕಡ 30ರಷ್ಟು |
| 3)90 ವಯಸ್ಸನ್ನು ಮೀರಿದವರಿಗೆ | ಮೂಲ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನದ ಶೇಕಡ 50ರಷ್ಟು |

6ನೇ ರಾಜ್ಯ ವೇತನ ಆಯೋಗವು ರಾಜ್ಯ ಸರ್ಕಾರಿ ಪಿಂಚಣಿದಾರರು / ಕುಟುಂಬ ಪಿಂಚಣಿದಾರರಿಗೆ ಹೆಚ್ಚುವರಿ ಪಿಂಚಣಿಯನ್ನು ಮಂಜೂರು ಮಾಡುವ ವಿಷಯವನ್ನು ಪರಿಶೀಲಿಸಿ, ದಿ:01.07.1993 ರಂದು ಅಥವಾ ತದನಂತರ ನಿವೃತ್ತರಾದ 80 ವರ್ಷಗಳು ಮತ್ತು ಮೇಲ್ಪಟ್ಟ ಎಲ್ಲಾ ರಾಜ್ಯ ಸರ್ಕಾರಿ ಪಿಂಚಣಿದಾರರು / ಕುಟುಂಬ ಪಿಂಚಣಿದಾರರಿಗೆ ಕೇಂದ್ರ ಸರ್ಕಾರದ ಪಿಂಚಣಿದಾರರಿಗೆ ಅನ್ವಯವಾಗುವ ಸಮಾನ ದರಗಳಲ್ಲಿ ಹೆಚ್ಚುವರಿ ಪಿಂಚಣಿಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತದೆ.

ಹೆಚ್ಚುವರಿ ಪಿಂಚಣಿ ಮಂಜೂರಾತಿ ಕುರಿತಂತೆ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸನ್ನು ರಾಜ್ಯ ಸರ್ಕಾರವು ಒಪ್ಪಿಕೊಂಡಿರುತ್ತದೆ ಮತ್ತು ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರಿ ಆದೇಶ ಸಂಖ್ಯೆ: ಆಇ(ವಿಶೇಷ) 120 ಪಿಇಎನ್ 2018, ಬೆಂಗಳೂರು, ದಿನಾಂಕ: 11.01.2019

80 ವರ್ಷಗಳು ಮತ್ತು ಅದಕ್ಕೂ ಮೇಲ್ಪಟ್ಟ ಎಲ್ಲಾ ರಾಜ್ಯ ಸರ್ಕಾರಿ ಪಿಂಚಣಿದಾರರು / ಕುಟುಂಬ ಪಿಂಚಣಿದಾರರುಗಳಿಗೆ ದಿನಾಂಕ:01.01.2019 ರಿಂದ ಜಾರಿಗೆ ಬರುವಂತೆ ಹೆಚ್ಚುವರಿ ನಿವೃತ್ತಿ ವೇತನ /

ಕುಟುಂಬ ನಿವೃತ್ತಿ ವೇತನವನ್ನು ಮಂಜೂರು ಮಾಡಲು ಸರ್ಕಾರವು ಹರ್ಷಿಸುತ್ತದೆ.

ಪಿಂಚಣಿದಾರರು / ಕುಟುಂಬ ಪಿಂಚಣಿದಾರರು ಯಾವಾಗ 80 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವಯೋಮಾನವನ್ನು ಪೂರ್ಣಗೊಳಿಸುತ್ತಾರೋ ಅಂದಿನಿಂದ, ಹೆಚ್ಚುವರಿ ಪಿಂಚಣಿಯ ಮೊತ್ತವನ್ನು ಈ ಕೆಳಗಿನ ದರಗಳಲ್ಲಿ ಪಾವತಿಸತಕ್ಕದ್ದು:

| ಪಿಂಚಣಿದಾರರ ಮತ್ತು ಕುಟುಂಬ ಪಿಂಚಣಿದಾರರ ವಯಸ್ಸು | ಹೆಚ್ಚುವರಿ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನದ ಪ್ರಮಾಣ |
|---|---|
| 1) 80 ರಿಂದ 85 ವಯಸ್ಸಿನ ಒಳಗಿನವರಿಗೆ | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 20ರಷ್ಟು |
| 2) 85 ರಿಂದ 90 ವಯಸ್ಸಿನ ಒಳಗಿನವರಿಗೆ | ಮೂಲ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನದ ಶೇಕಡ 30ರಷ್ಟು |
| 3) 90 ರಿಂದ 95 ವಯಸ್ಸಿನ ಒಳಗಿನವರಿಗೆ | ಮೂಲ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನದ ಶೇಕಡ 40ರಷ್ಟು |
| 4) 95 ರಿಂದ 100 ವಯಸ್ಸಿನ ಒಳಗಿನವರಿಗೆ | ಮೂಲ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನದ ಶೇಕಡ 50ರಷ್ಟು |
| 5) 100 ವರ್ಷಗಳ ಮೇಲ್ಪಟ್ಟವರಿಗೆ | ಮೂಲ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನದ ಶೇಕಡ 100ರಷ್ಟು |

2. ಹೆಚ್ಚುವರಿ ನಿವೃತ್ತಿ ವೇತನ ಮೊತ್ತದ ಮಂಜೂರಾತಿಯು ಈ ಕೆಳಗಿನ ಷರತ್ತುಗಳ ಪೂರೈಕೆಗೆ ಒಳಪಟ್ಟಿರುತ್ತದೆ.

i. ಪಿಂಚಣಿದಾರರು / ಕುಟುಂಬ ಪಿಂಚಣಿದಾರರು 80 ಅಥವಾ ಅದಕ್ಕೂ ಮೇಲ್ಪಟ್ಟ ವಯೋಮಾನವನ್ನು ಯಾವಾಗ ಪೂರ್ಣಗೊಳಿಸುತ್ತಾರೋ ಅಂದಿನಿಂದ, ಈ ಮೇಲೆ ತಿಳಿಸಿದಂತೆ ಹೆಚ್ಚುವರಿ ಪಿಂಚಣಿಯ ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ. ಪಿಂಚಣಿದಾರರು / ಕುಟುಂಬ ಪಿಂಚಣಿದಾರರು ಯಾವ ತಿಂಗಳಿನಲ್ಲಿ 80, 85, 90, 95 ಮತ್ತು 100 ವರ್ಷಗಳ ವಯಸ್ಸನ್ನು ಪೂರ್ಣಗೊಳಿಸುತ್ತಾರೋ, ಆ ತಿಂಗಳಿನಿಂದ ಈ ಮೇಲೆ ನಮೂದಿಸಿರುವ ದರಗಳಲ್ಲಿ ಹೆಚ್ಚುವರಿ ಪಿಂಚಣಿ / ಕುಟುಂಬ ಪಿಂಚಣಿಯು ಲಭ್ಯವಾಗತಕ್ಕದ್ದು.

ii. ಈ ಆದೇಶ ಹೊರಡಿಸಿದ ದಿನಾಂಕದಂದು ಅಥವಾ ಜನವರಿ 2019ನೇ ತಿಂಗಳಿನಲ್ಲಿ 80 ವರ್ಷಗಳು ಹಾಗೂ ಅದಕ್ಕೂ ಹೆಚ್ಚಿನ ವಯಸ್ಸನ್ನು ಪೂರೈಸುವ ಪಿಂಚಣಿದಾರರು / ಕುಟುಂಬ ಪಿಂಚಣಿದಾರ ಪ್ರಕರಣದಲ್ಲಿ, ಹೆಚ್ಚುವರಿ ಪಿಂಚಣಿ / ಕುಟುಂಬ ಪಿಂಚಣಿಯನ್ನು, ದಿನಾಂಕ: 01.01.2019ರಂದು ಅವರು ಪಡೆಯುತ್ತಿದ್ದ ಮೂಲ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನದ ಮೇಲೆ ಲೆಕ್ಕ ಹಾಕತಕ್ಕದ್ದು.

iii. ಇತರೆ ಪ್ರಕರಣಗಳಲ್ಲಿ ಹೆಚ್ಚುವರಿ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನವನ್ನು ಪಿಂಚಣಿದಾರರು / ಕುಟುಂಬ ಪಿಂಚಣಿದಾರರು 80 ವರ್ಷಗಳು ಮತ್ತು ಅದಕ್ಕೂ ಮೇಲ್ಪಟ್ಟು ವಯಸ್ಸನ್ನು ಪೂರ್ಣಗೊಳಿಸಿದ ದಿನಾಂಕದಂದು ಪಡೆಯುತ್ತಿರುವ ಮೂಲ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನದ ಆಧಾರದ ಮೇಲೆ ಲೆಕ್ಕ ಹಾಕತಕ್ಕದ್ದು.

iv. ಈ ಆದೇಶದನ್ವಯ ಮಂಜೂರು ಮಾಡಲಾಗುವ ಹೆಚ್ಚುವರಿ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನವನ್ನು ಲೆಕ್ಕಾಚಾರ ಮಾಡಲು ಮೂಲ ನಿವೃತ್ತಿ ವೇತನ / ಮೂಲ ಕುಟುಂಬ ನಿವೃತ್ತಿ ವೇತನವನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ಪರಂತು, ಈ ಆದೇಶದನ್ವಯ ಮಂಜೂರು ಮಾಡಲಾದ ಹೆಚ್ಚುವರಿ ಪಿಂಚಣಿಯನ್ನು ಲೆಕ್ಕಾಚಾರಕ್ಕೆ ಪರಿಗಣಿಸುವಂತಿಲ್ಲ.

v. ಹೆಚ್ಚುವರಿ ನಿವೃತ್ತಿ ವೇತನದ ಮೊತ್ತವನ್ನು, ಪಿಂಚಣಿಯ ಪ್ರತ್ಯೇಕ ಭಾಗವಾಗಿ (distinct element) ನಮೂದಿಸತಕ್ಕದ್ದು ಹಾಗೂ ಅದನ್ನು ತುಟ್ಟಿಭತ್ಯೆಯ ಲೆಕ್ಕಾಚಾರಕ್ಕೆ ಪರಿಗಣಿಸತಕ್ಕದ್ದು. ಅದರಂತೆ, ಇನ್ನು ಮುಂದೆ ಖಜಾನಾಧಿಕಾರಿಗಳು / ಪಾವತಿಸುವ ಬ್ಯಾಂಕುಗಳು ಪಿ.ಪಿ.ಓ ದಲ್ಲಿ ಕಾಲಕಾಲಕ್ಕೆ ಹೆಚ್ಚುವರಿ ಪಿಂಚಣಿಯನ್ನು ನಮೂದಿಸಲು ಕ್ರಮ ವಹಿಸುವುದು.

vi. ಈ ಆದೇಶದನ್ವಯ ಮಂಜೂರು ಮಾಡಲಾದ ಹೆಚ್ಚುವರಿ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನವನ್ನು ಪಿಂಚಣಿಯ ಪರಿವರ್ತನೆಗೆ (ಕಮ್ಯುಟೇಶನ್) ಮತ್ತು ಇತರೆ ನಿವೃತ್ತಿ ಸೌಲಭ್ಯದ ಉದ್ದೇಶಗಳಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

vii. ಸಕ್ಷಮ ಪ್ರಾಧಿಕಾರದಿಂದ ಸೂಕ್ತ ಅನುಮೋದನೆ / ಆದೇಶ ಪಡೆದ ನಂತರ, ಪಿಂಚಣಿ ಪಾವತಿ ಪ್ರಾಧಿಕಾರಿಗಳಾದ, ಖಜಾನೆ / ಬ್ಯಾಂಕುಗಳು ಹೆಚ್ಚುವರಿ ಪಿಂಚಣಿ / ಕುಟಂಬ ಪಿಂಚಣಿಯನ್ನು ಅರ್ಹ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನದಾರರಿಗೆ ಪಾವತಿಸಲು ಕ್ರಮ ವಹಿಸುವುದು.

viii. ಹೆಚ್ಚುವರಿ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನವನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ, ಪಿ.ಪಿ.ಓ ಗಳಲ್ಲಿ ನಮೂದಿಸಿರುವ ಜನ್ಮ ದಿನಾಂಕದ ಆಧಾರದ ಮೇಲೆ ನಿವೃತ್ತಿ ವೇತನದಾರರ ವಯಸ್ಸನ್ನು ಲೆಕ್ಕಹಾಕತಕ್ಕದ್ದು.

ix. ಪಿ.ಪಿ.ಓ ನಲ್ಲಿ ಜನ್ಮ ದಿನಾಂಕವನ್ನು ನಮೂದಿಸದೇ ಇರುವ ಪ್ರಕರಣದಲ್ಲಿ, ಪಿಂಚಣಿ ಮಂಜೂರಾತಿ ಪ್ರಾಧೀಕಾರವು ಪಿಂಚಣಿದಾರನ / ಕುಟುಂಬ ಪಿಂಚಣಿದಾರನ ಜನ್ಮ ದಿನಾಂಕವನ್ನು ಮತ್ತು ವಯಸ್ಸನ್ನು, ದಿ:6.1.2011ರ ಅಧಿಕೃತ ಜ್ಞಾಪನ ಸಂಖ್ಯೆ:ಆಇ(ವಿ) 27 ಪಿಇಎನ್ 2007ರಲ್ಲಿನ ಮಾರ್ಗಸೂಚಿಗಳಂತೆ ಪರಿಗಣಿಸಿ ನಿರ್ಧರಿಸತಕ್ಕದ್ದು.

x. ಹೆಚ್ಚುವರಿ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನವನ್ನು ಮಂಜೂರು ಮಾಡಿದ ನಂತರದಲ್ಲಿ ಪಿಂಚಣಿ ವ್ಯತ್ಯಾಸದ ಬಾಕಿ ಮೊತ್ತವನ್ನು ನಗದಾಗಿ ಪಾವತಿಸತಕ್ಕದ್ದು ಮತ್ತು ಅದನ್ನು ಪಿಂಚಣಿದಾರರ / ಕುಟುಂಬ ಪಿಂಚಣಿದಾರರ ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು.

xi. ಈ ಆದೇಶದಿಂದಾಗಿ ಪಾವತಿಸಬೇಕಾದ ಹೆಚ್ಚುವರಿ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನ ಮೊತ್ತದಲ್ಲಿ 50 ಪೈಸೆ ಮತ್ತು ಅದಕ್ಕಿಂತ ಹೆಚ್ಚಿನ ಭಿನ್ನಾಂಶಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು 50 ಪೈಸೆಗಿಂತ ಕಡಿಮೆ ಇರುವ ಭಿನ್ನಾಂಶವನ್ನು ಕಡೆಗಣಿಸತಕ್ಕದ್ದು.

3. ಈ ಆದೇಶವನ್ನು ಜಾರಿಗೊಳಿಸುವುದರಲ್ಲಿ ಯಾವುದೇ ತೊಂದರೆಗಳು ಉದ್ಭವಿಸಿದಲ್ಲಿ, ಸೂಕ್ತ ಆದೇಶ / ಸ್ಪಷ್ಟೀಕರಣಕ್ಕಾಗಿ ಅಂತಹ ಪ್ರಕರಣಗಳನ್ನು ಸರ್ಕಾರದ ಆರ್ಥಿಕ ಇಲಾಖೆಗೆ ಕಳುಹಿಸುವುದು.
4. ಹೆಚ್ಚುವರಿ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನ ಕುರಿತ, ದಿ:13.10.2010ರ ಸರ್ಕಾರಿ ಆದೇಶ ಸಂ.ಆಇ(ವಿಶೇಷ) 27 ಪಿಇಎನ್ 2007ನ್ನು ದಿ:01.01.2019ರಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪ್ರಕಾಶ್.ವೈ.ಕೆ.)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವಿಶ್ರಾಂತಿ ವೇತನ)

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ / ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
4. ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳು.
5. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
6. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ಮಹಾಲೇಖಪಾಲರು (ಲೆಕ್ಕಪತ್ರ / ಲೆಕ್ಕಪರಿಶೋಧನೆ) ಜಿ.ಎಂ ಶಾಖೆ , ಬೆಂಗಳೂರು.
8. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ / ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13. ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು ಮತ್ತು ಎಲ್ಲಾ ಜಿಲ್ಲಾ ಖಜಾನೆಗಳು.
14. ಎಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
15. ಸಂಕಲನಕಾರರು, ಕರ್ನಾಟಕ ಗೆಜೆಟ್‌ನ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ.
16. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
17. ಅಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
18. ಕರ್ನಾಟಕ ಸರ್ಕಾರದ ಸಚಿವಾಲಯದ ಎಲ್ಲಾ ಶಾಖೆಗಳು.
19. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ / ವಿಧಾನ ಮಂಡಲದ ಗ್ರಂಥಾಲಯ,
20. ವಾರಪತ್ರ / ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಆರ್ಥಿಕ ಇಲಾಖೆಯ ಅಂತರ್ಜಾಲತಾಣ: www.finance.kar.nic.in ವೀಕ್ಷಿಸಿ